
16 May 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**
ತಾಯಿಯ ಒಡಲು ಪ್ರೀತಿಸುವುದನ್ನು ಕಲಿಸಿದರೆ, ಅಪ್ಪನ ಹೆಗಲು ಜವಾಬ್ದಾರಿಯನ್ನು ಕಲಿಸುತ್ತದೆ!
-ಸ್ನೇಹಾ ಆನಂದ್

info.varthaman@gmail.com


ರಾಮನಗರ ಬಯೋ ಮೀಥನೈಜೇಷನ್ ಘಟಕ ಚಾಲನೆ — ಪುಟ ಸಂ. 2


ನಿಮಾನ್ಸ್ ಆಸ್ಪತ್ರೆ ಸ್ಥಳಾಂತರಿಸಿ: ರೈತರಿಂದ ಪಾದಯಾತ್ರೆ — ಪುಟ ಸಂ. 3


ಕೆ.ಬೆಳತ್ತೂರು ಗ್ರಾಮಕ್ಕೆ ಕಾರ್ಯ ನಿರ್ವಾಹಕ ಅಧಿಕಾರಿ ಭೇಟಿ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 172 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಇಂಧನ ದರ ಏರಿಕೆ ಶಾಕ್

## ಇಂದಿನಿಂದ ದುಬಾರಿ ದುನಿಯಾ | ಎಲ್ಲಾ ವಸ್ತುಗಳ ಸಾಗಾಣಿಕೆ ದರ ಹೆಚ್ಚಳ

**ನವದೆಹಲಿ:** ದೇಶಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ 3.5 ರೂ. ಹೆಚ್ಚಳವಾಗಿದೆ. ತೈಲ ಮಾರಾಟ ಕಂಪನಿಗಳು ಜಾಗತಿಕ ಮಾರುಕಟ್ಟೆಯ ಇಂಧನ ದರ ಏರಿಕೆಗೆ ಅನುಗುಣವಾಗಿ ದರವನ್ನು ಏರಿಕೆ ಮಾಡಿವೆ.

ಪರಿಷ್ಕೃತ ದರ ಶುಕ್ರವಾರ ಬೆಳಿಗ್ಗೆಯಿಂದಲೇ ಜಾರಿಯಾಗಿದೆ. ದರ ಏರಿಕೆಯಿಂದ ಬೆಂಗಳೂರಿನಲ್ಲಿ ಪ್ರತಿ ಲೀಟರ್ ದರ 106.17 ರೂ. ಮತ್ತು ಡಿಸೇಲ್ ದರ 94.10 ರೂ. ತಲುಪಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಸಂಸ್ಥೆಗಳು ಹೊಸ ದರ ಜಾರಿಗೆ ತಂದಿವೆ. ಸರ್ಕಾರಿ ತೈಲ ಕಂಪನಿಗಳು ಇಂಧನ ದರ ಪರಿಷ್ಕರಣೆಗೆ ಮುಂದಾಗಿರುವುದು ಜನತೆಗೆ ಮತ್ತೊಂದು ಬೆಲೆ ಶಾಕ್ ನೀಡಿವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಸತತ ಏರಿಳಿತವಾಗುತ್ತಿದೆ. ಪಶ್ಚಿಮ ಏಷ್ಯಾ ಹಾಗೂ ಇರಾನ್ ಸಂಘರ್ಷದಿಂದಾಗಿ ತೈಲ ಸಾಗಣೆಯ ಜಲಮಾರ್ಗಗಳಲ್ಲಿ ವ್ಯತ್ಯಯ ಉಂಟಾಗಿದೆ. ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ಕುಸಿದಿರುವುದರಿಂದ ಆಮದು ವೆಚ್ಚ ಹೆಚ್ಚಾಗಿದ್ದರಿಂದ ದರ ಏರಿಕೆ ಮಾಡಲಾಗಿದೆ.

ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷ ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಭಾರೀ ಅಸ್ಥಿರತೆ ಉಂಟು ಮಾಡಿದೆ. ತೈಲ ಉತ್ಪಾದನೆ ಮತ್ತು ಸಾಗಣೆ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗುವ ಭೀತಿಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದೆ. ಭಾರತ ಆಮದು ಮಾಡುವ ಕಚ್ಚಾ ತೈಲದ ಸರಾಸರಿ ಬೆಲೆ ಫೆಬ್ರವರಿಯಲ್ಲಿ ಬ್ಯಾರೆಲ್‌ಗೆ ಸುಮಾರು 69 ಡಾಲರ್ ಇದ್ದರೆ, ಯುದ್ಧ ಆರಂಭವಾದ ಬಳಿಕ ಅದು 113ರಿಂದ 114 ಡಾಲರ್ ಮಟ್ಟಕ್ಕೇರಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿದ್ದರೂ ಪಂಚ ರಾಜ್ಯ ಚುನಾವಣೆ ಹಿನ್ನೆಲೆಯಲ್ಲಿ ಕಳೆದ 11 ವಾರಗಳಿಂದ ದೇಶೀಯ ಇಂಧನ ದರವನ್ನು ತೈಲ ಕಂಪನಿಗಳು ಸ್ಥಿರವಾಗಿಯೇ ಉಳಿಸಿ ಕೊಂಡಿದ್ದವು ಎಂದು ಮೂಲಗಳು ಹೇಳಿವೆ.

2022ರ ಏಪ್ರಿಲ್‌ನಿಂದಲೇ ಪುಟ 2ಕ್ಕೆ




### ಸಿಎನ್‌ಜಿ ಬೆಲೆಯೂ ಏರಿಕೆ

**ನವದೆಹಲಿ:** ಪೆಟ್ರೋಲ್, ಡೀಸೆಲ್ ದರ ಏರಿಕೆಯಾದ ಬೆನ್ನಲ್ಲೇ ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (ಸಿ'ಎನ್‌ಜಿ) ಬೆಲೆ ಏರಿಕೆಯಾಗಿದೆ. ಪ್ರತಿ ಕೆಜಿ ಸಿಎನ್‌ಜಿ ದರವನ್ನು 2 ರೂ. ಏರಿಸಲಾಗಿದೆ.

ಪರಿಷ್ಕೃತ ದರ ಇಂದು ಬೆಳಗ್ಗೆಯಿಂದಲೇ ಜಾರಿಯಾಗಿದೆ. ದರ ಏರಿಕೆಯಿಂದ ಬೆಂಗಳೂರಿನಲ್ಲಿ 1 ಕೆಜಿ ಸಿಎನ್‌ಜಿ ದರ 93 ರೂಗೆ ಏರಿಕೆಯಾಗಿದೆ. ವಿತರಕರ (ಗ್ಯಾಸ್ ಕಂಪನಿಗಳು) ಆಧಾರದ ಮೇಲೆ ಬೆಲೆಯಲ್ಲಿ 30 ಪೈಸೆಯಿಂದ 1 ರೂ. ರವರೆಗೆ ಪುಟ 2ಕ್ಕೆ

### ಮುಂದಿನ ಪರಿಣಾಮ ಏನು?

ಇಂಧನ ದರ ಏರಿಕೆಯಿಂದ ಸಾರಿಗೆ ವೆಚ್ಚ ಹೆಚ್ಚುವ ಸಾಧ್ಯತೆ ಇದೆ. ಟೆಂಪೋ ಮತ್ತು ಟ್ರಕ್‌ಗಳು ಡೀಸೆಲ್ ಬಳಸುವುದರಿಂದ ಸರಕು ಸಾಗಣೆ ದರಗಳು ತಕ್ಷಣವೇ ದುಬಾರಿಯಾಗಲಿವೆ. ಸಾಗಣೆ ವೆಚ್ಚ ಹೆಚ್ಚಾಗುವುದರಿಂದ ಮಾರುಕಟ್ಟೆಗೆ ಬರುವ ತರಕಾರಿ, ಹಣ್ಣು, ಧಾನ್ಯಗಳು ಮತ್ತು ಹಾಲಿನ ಬೆಲೆಗಳು ಹೆಚ್ಚಾಗಲಿವೆ. ಬಸ್, ಆಟೋ ಮತ್ತು ಟ್ಯಾಕ್ಸಿಗಳ ಪ್ರಯಾಣ ದರವೂ ಏರಿಕೆಯಾಗಲಿದೆ. ಪುಟ 2ಕ್ಕೆ

### ಖಾಸಗಿ ಬಸ್ ದರವೂ ಹೆಚ್ಚಳ



**ಬೆಂಗಳೂರು:** ಪೆಟ್ರೋಲ್, ಡಿಸೇಲ್ ದರ ಏರಿಕೆ ಬೆನ್ನಲ್ಲೇ ಖಾಸಗಿ ಬಸ್ ಟಿಕೆಟ್ ದರವನ್ನು ಸಹ ಹೆಚ್ಚಳ ಮಾಡಲಾಗಿದೆ. ಶುಕ್ರವಾರ ಮಧ್ಯರಾತ್ರಿಯಿಂದಲೇ ಜಾರಿಯಾಗಲಿದೆ.

ಈ ಕುರಿತು ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘ ಮಾಹಿತಿ ನೀಡಿದೆ. ಶೇ.20ರಿಂದ 30ರಷ್ಟು ದರ ಏರಿಕೆ ಮಾಡಲಾಗಿದೆ. ಇಂದು ಮಧ್ಯರಾತ್ರಿಯಿಂದಲೇ ಜಾರಿಗೆ ಬರಲಿದೆ. ಪ್ರತಿದಿನ ಖಾಸಗಿ ಬಸ್ ಮಾಲೀಕರು ಕನಿಷ್ಠ 150 ಲೀಟರ್ ಡೀಸೆಲ್ ಹಾಕಿಸಿಕೊಳ್ಳಬೇಕು. ನಮಗೆ ಪ್ರತಿ ಟ್ರಿಪ್‌ಗೆ ಹೆಚ್ಚುವರಿಯಾಗಿ 450 ರೂ. ಅಂದರೆ ಹೊರೆ ಆಗಲಿದೆ. ಹೀಗಾಗಿ ಅನಿವಾರ್ಯವಾಗಿ ದರ ಏರಿಕೆ ಮಾಡುತ್ತಿದ್ದೇವೆ. ಇದರ ಪರಿಣಾಮ ಪ್ರಯಾಣಿಕರ ಮೇಲೆ ಬೀಳಲಿದೆ ಎಂದಿದೆ.

ಕರ್ನಾಟಕ ರಾಜ್ಯ ಖಾಸಗಿ ಶಾಲಾ ವಾಹನಗಳ ಯುನಿಯನ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಸ್ಕೂಲ್ ವಾಹನಗಳ ದರ ಶೇ.10ರ ವರೆಗೆ ಏರಿಕೆ ಮಾಡಿರುವುದಾಗಿ ತಿಳಿಸಿದ್ದಾರೆ. ಇದರ ಜೊತೆಗೆ ರಾಜ್ಯ ವೆಲ್ ಪಾಸೆಂಜರ್ ಪುಟ 2ಕ್ಕೆ

### ದೇಶದ ಜನರಿಗೆ 'ಮಿಸ್ಟರ್ ಮೋದಿ' ಕೊಡುಗೆ: ಡಿಕೆಶಿ



**ಬೆಂಗಳೂರು:** ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದ್ದಾರೆ. ಇದು ಮಿಸ್ಟರ್ ನರೇಂದ್ರ ಮೋದಿ ಅವರ ಕೊಡುಗೆ ಎಂದು ಲೇವಡಿ ಮಾಡಿದ್ದಾರೆ.

ಇಂಧನ ಬೆಲೆ ಏರಿಕೆಗೆ ಪ್ರಧಾನಿಯವರ ವಿಫಲ ವಿದೇಶಾಂಗ ನೀತಿಯೇ ಕಾರಣ. ಬೇರೆ ದೇಶಗಳ ಜೊತೆ ಸರಿಯಾದ ಸಂಬಂಧ ಇಟ್ಟುಕೊಳ್ಳುವಲ್ಲಿ ಪ್ರಧಾನಿ ವಿಫಲವಾಗಿದ್ದಾರೆ. ಜನರು ತಮ್ಮ ದುಡಿಮೆಯಲ್ಲಿ ಬದುಕುತ್ತಿದ್ದಾರೆ. ಆದರೆ ಬೆಲೆ ಕಡಿಮೆ ಮಾಡಲು ಇವರಿಂದ ಸಾಧ್ಯವಾಗುತ್ತಿಲ್ಲ ಎಂದು ದೂರಿದರು.

ಚಿನ್ನ ಖರೀದಿಸಬೇಡಿ, ಎಣ್ಣೆ ಬಳಸಬೇಡಿ ಎಂದು ಪ್ರಧಾನಿ ಹೇಳುತ್ತಾರೆ. ಮಾಂಗಲ್ಯ ಸರ ಎಲ್ಲರಿಗೂ ಅಗತ್ಯ, ಅದನ್ನು ತೆಗೆದುಕೊಳ್ಳಬೇಡಿ ಎನ್ನಲು ಹೇಗೆ ಸಾಧ್ಯ? ಇದೆಲ್ಲವೂ ಅವಾಸ್ತವಿಕ ಮಾತುಗಳು ಸಿಟ್ಟು ಹೊರಹಾಕಿದರು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಟೀಕೆಗಳಿಗೆ ಪ್ರತಿಕ್ರಿಯಿಸಿದ ಡಿಸಿಎಂ, ನಾನು ಬಿಡದಿಗೆ ಹೋಗುತ್ತೇನೆ. ರೈತರು ನನ್ನ ವಿರುದ್ಧ ಘೋಷಣೆ ಕೂಗಬಹುದು ಅಥವಾ ಕಲ್ಲು ತೂರಾಟ ನಡೆಸಬಹುದು. ಅದಕ್ಕೇನು ಹೆದರಲು ಸಾಧ್ಯವೇ? ಕುಮಾರಸ್ವಾಮಿ ಈ ಹಿಂದೆ ಆರಂಭಿಸಿದ್ದ ಕೆಲಸವನ್ನೇ ನಾನು ಮುಂದುವರಿಸುತ್ತಿದ್ದೇನೆ. ಚರ್ಚೆಗೆ ದಿನಾಂಕ ನಿಗದಿ ಮಾಡಲಿ, ನಾನು ಸಿದ್ಧನಿದ್ದೇನೆ ಪುಟ 2ಕ್ಕೆ

# ಮೇಲ್ಛಾವಣಿ ಕುಸಿತ: ನಾಲ್ವರು ಸಾವು

**ವಿಜಯಪುರ:** ಭಾರೀ ಗಾಳಿ ಮಳೆಗೆ ಮನೆಯ ಮೇಲ್ಛಾವಣಿ ಕುಸಿದು ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿರುವ ಘಟನೆ ಆಲಮೇಲ ತಾಲೂಕಿನ ಮೊರಗಟಿ ಗ್ರಾಮದಲ್ಲಿ ನಡೆದಿದೆ.

ಮೃತರನ್ನು ಗ್ರಾಮದ ಗುರುನಾಥ ಬಡಿಗೇರ (35), ಪತ್ನಿ ಜ್ಯೋತಿ ಬಡಿಗೇರ (28), ಮಕ್ಕಳಾದ ಕಾಳಮ್ಮ ಬಡಿಗೇರ (13) ಮತ್ತು ಕೀರ್ತಿ ಬಡಿಗೇರ (9) ಎಂದು ಗುರುತಿಸಲಾಗಿದೆ. ತಮ್ಮ ಮನೆಯ ದುರಸ್ತಿ ಮಾಡಿಸುತ್ತಿದ್ದ ಗುರುನಾಥ ಬಡಿಗೇರ, ಹಳೆಯ ಮನೆಯೊಂದರಲ್ಲಿ ಬಾಡಿಗೆಗೆ ಇದ್ದರು. ಗುರುವಾರ ರಾತ್ರಿ ಸುರಿದ ಮಳೆಗೆ ಮನೆಯ ಮೇಲ್ಛಾವಣಿ ಕುಸಿದು ಬಿದ್ದು ದುರಂತ ಸಂಭವಿಸಿದೆ.

ಸ್ಥಳಕ್ಕೆ ಸಿಂದಗಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ನಾಲ್ವರ ಶವ ಹೊರ ತೆಗೆದಿದ್ದಾರೆ. ನಾಲ್ವರನ್ನು ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ತಮ್ಮ ಮನೆಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದ್ದ ಕಾರಣ ಕುಟುಂಬಸ್ಥರು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಘಟನೆ ನಡೆದ ದಿನ ಎಂದಿನಂತೆ ಮನೆಯಲ್ಲಿ ಮಲಗಿದ್ದರು. ಈ ವೇಳೆ ಧಾರಾಕಾರ ಮಳೆಯಿಂದಾಗಿ



ಮನೆಯ ಮೇಲ್ಛಾವಣಿ ಕುಸಿದಿದೆ. ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇದೇ ಸಮಯದಲ್ಲಿ ಮನೆಯಿಂದ ಆಚೆ ಮಲಗಿದ್ದ ಗುರುನಾಥ ಅವರ ತಾಯಿ ಹಾಗೂ ಮತ್ತೊಬ್ಬ ಪುತ್ರ ವೀರೇಶ (10) ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಸಿಂದಗಿ ಪೊಲೀಸರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನಾಲ್ವರ ಮೃತದೇಹಗಳನ್ನ ಹೊರತಗೆದಿದ್ದಾರೆ.

### 20 ಲಕ್ಷ ಪರಿಹಾರ

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಘಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕುಟುಂಬದವರಿಗೆ ಸಾಂತ್ವನ ಹೇಳಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎಂ.ಬಿ.ಪಾಟೀಲ, ಈ ದುರ್ಘಟನೆ ನಡೆಯಬಾರದಿತ್ತು. ಸಾವಿಗೀಡಾದ ನಾಲ್ಕು ಜನರ ಕುಟುಂಬಕ್ಕೆ ತಲಾ 5 ಲಕ್ಷದಂತೆ 20 ಲಕ್ಷ ಪರಿಹಾರ ನೀಡಲಾಗುವುದು. ಬದುಕುಳಿದಿರುವ ಬಾಲಕ ವೀರೇಶ ಬಡಿಗೇರ ವಿದ್ಯಾಭ್ಯಾಸಕ್ಕೆ ವೈಯಕ್ತಿಕವಾಗಿ ನೆರವಾಗುವುದಾಗಿ ಹೇಳಿದರು. ಪರಿಹಾರದ ಹಣವನ್ನು ಬಾಲಕನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಠೇವಣಿ ಇಡಲಾಗುವುದು ಎಂದು ತಿಳಿಸಿದರು.

# ಕಂಪ್ಯೂಟರ್ ಆಧಾರಿತ ನೀಟ್

## ಮುಂದಿನ ವರ್ಷದಿಂದ ಜಾರಿ: ಕೇಂದ್ರ ಶಿಕ್ಷಣ ಸಚಿವ ಪ್ರಧಾನ್

**ನವದೆಹಲಿ:** ಮುಂದಿನ ವರ್ಷದಿಂದ ಕಂಪ್ಯೂಟರ್ ಆಧಾರಿತ ನೀಟ್ ಪರೀಕ್ಷೆ ನಡೆಸಲಾಗುವುದು. ಪ್ರಶ್ನೆ ಪರೀಕ್ಷೆಯ ಸೋರಿಕೆಯ ಜವಾಬ್ದಾರಿಯನ್ನು ತೆಗೆದುಕೊಂಡು ಪರೀಕ್ಷಾ ಮಾಫಿಯಾ ವಿರುದ್ಧ ಹೋರಾಡುತ್ತೇವೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಇದರ ಜವಾಬ್ದಾರಿ ನಾವು ತೆಗೆದುಕೊಳ್ಳುತ್ತೇವೆ. ಸಚಿವಾಲಯ ಇದನ್ನು ಸರಿಪಡಿಸಲಿದೆ. ಮೇ 3ರಂದು ನಡೆಸಲಾಗಿದ್ದ ನೀಟ್ ಪರೀಕ್ಷೆಯನ್ನು ಈಗಾಗಲೇ ರದ್ದುಗೊಳಿಸಲಾಗಿದೆ. ಜೂನ್ 21ಕ್ಕೆ ಮರುಪರೀಕ್ಷೆ ದಿನಾಂಕ ನಿಗದಿಪಡಿಸಲಾಗಿದೆ. ಮುಂದಿನ ವರ್ಷದಿಂದ ನೀಟ್ ಪರೀಕ್ಷೆಯನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆ ವಿಧಾನದಲ್ಲಿ ನಡೆಸಲಾಗುವುದು ಎಂದು ತಿಳಿಸಿದರು.

ಮೇ 3ರಂದು ಪರೀಕ್ಷೆ ನಡೆದ ಬಳಿಕ ಮೇ 7ರಂದು ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ದೂರು ಬಂದಿತ್ತು. ಪರೀಕ್ಷೆಗೂ ಮುನ್ನ ಕೆಲವೆಡೆ ನೀಡಲಾಗಿದ್ದ ಗೆಸ್ ಪೇಪರ್‌ನಲ್ಲಿ



ಪರೀಕ್ಷೆಯಲ್ಲಿ ನೀಡಲಾಗಿದ್ದ ಹೆಚ್ಚಿನ ಪ್ರಶ್ನೆಗಳು ಬಂದಿದ್ದವು ಎಂದು ಆರೋಪಿಸಲಾಗಿತ್ತು. ಕೂಡಲೇ ಉನ್ನತ ಶಿಕ್ಷಣ ಸಚಿವಾಲಯ ಈ ಸಂಬಂಧ ವಿಚಾರಣೆ ಆರಂಭಿಸಿ, ತನಿಖೆ ಹಸ್ತಾಂತರಿಸಿ ಬೇರೆ ರಾಜ್ಯಗಳನ್ನು ಸಂಪರ್ಕಿಸಿತ್ತು. ಮೇ 12ರಂದು ಗೆಸ್ ಪೇಪರ್ ಹೆಸರಲ್ಲಿ ಮೂಲ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಖಚಿತವಾಗಿದೆ. ಬಳಿಕ ಮೇ 13ರಂದು ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿದೆವು ಎಂದು ಹೇಳಿದರು. ಪುಟ 2ಕ್ಕೆ

### ಜೂ.21ರಂದು ನೀಟ್ ಮರು ಪರೀಕ್ಷೆ ನಿಗದಿ

**ನವದೆಹಲಿ:** ನೀಟ್ ಯುಜಿ ಮರು ಪರೀಕ್ಷೆಯನ್ನು ಜೂನ್ 21ರಂದು ನಡೆಸಲಾಗುತ್ತದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್'ಟಿಎ) ಅಧಿಕೃತವಾಗಿ ತಿಳಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿದ್ದರಿಂದ ಈಗ ಮರು ಪರೀಕ್ಷೆಯ ದಿನಾಂಕವನ್ನು ಪ್ರಕಟಿಸಲಾಗಿದೆ.

ಕೇಂದ್ರೀಯ ತನಿಖಾ ದಳ ಈಗ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸುತ್ತಿದೆ. ಹೆಚ್ಚಿನ ವಿವರಗಳಿಗಾಗಿ ಅಧಿಕೃತ ವೆಬ್‌ಸೈಟ್ ಅಥವಾ ಸಾಮಾಜಿಕ ಜಾಲತಾಣವನ್ನು ಮಾತ್ರ ಅವಲಂಬಿಸಬೇಕೆಂದು ತಿಳಿಸಿದೆ.

### ಕೇರಳಕ್ಕೆ 26ರಂದು ಮುಂಗಾರು ಪ್ರವೇಶ

**ನವದೆಹಲಿ:** ನೈರುತ್ಯ ಮುಂಗಾರು ನಾಲ್ಕು ದಿನ ಮುಂಚಿತವಾಗಿ ಕೇರಳವನ್ನು ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಮುನ್ಸೂಚನೆ ನೀಡಿದೆ.



ಸಾಮಾನ್ಯವಾಗಿ ಕೇರಳದಲ್ಲಿ ಜೂನ್ 1ರ ವೇಳೆಗೆ ಮುಂಗಾರು ಮಳೆ ಆರಂಭವಾಗುತ್ತದೆ. ಮುಂಗಾರು ಮಾರುತಗಳು ನಂತರ ಉತ್ತರ ಭಾರತದ ಕಡೆಗೆ ಸಾಗಿ, ದೇಶದ ಇತರ ಪ್ರದೇಶಗಳಿಗೂ ವ್ಯಾಪಿಸುತ್ತವೆ. ಮಳೆ ಮುನ್ಸೂಚನೆ ನೀಡಿರುವ ಐಎಂಡಿ, ನೈರುತ್ಯ ಮುಂಗಾರು ಮಾರುತಗಳು ಸಾಮಾನ್ಯಕ್ಕಿಂತ ನಾಲ್ಕು ದಿನಗಳ ಮೊದಲು ಅಂದರೆ, ಮೇ 26ರಂದು ಕೇರಳವನ್ನು ಪ್ರವೇಶಿಸುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಕಳೆದ ವರ್ಷ ಮುಂಗಾರು ಮಳೆಯು ಮೇ 24ರಂದೇ ಶುರುವಾಗಿತ್ತು

### ಟ್ರ್ಯಾಕ್ಟರ್ ಉರುಳಿ 7 ಮಂದಿ ಸಾವು

**ಕೊಪ್ಪಳ:** ಟ್ರ್ಯಾಕ್ಟರ್ ಮತ್ತು ಟ್ಯಾಂಕರ್ ಲಾರಿ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಗು ಸೇರಿ ಏಳು ಮಂದಿ ಸಾವನ್ನಪ್ಪಿರುವ ದುರ್ಘಟನೆ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಬಳಿ ಶುಕ್ರವಾರ ನಡೆದಿದೆ.

ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಯಶವಂತ ನಗರ ಹಾಗೂ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಮರ್ಲಾಯನಹಳ್ಳಿ ಗ್ರಾಮದ ನಿವಾಸಿಗಳಾದ ಕೆಂಚಪ್ಪ (35), ಮಹಾಂತೇಶ್ (18) ಭರತ್ (01) ಸವಿತಾ (12) ಮಾರೇಶ್, ಗೌರಮ್ಮ, ಮಂಜಮ್ಮ ಮೃತಪಟ್ಟವರು.

50ನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಅಪಘಾತ ಸಂಭವಿಸಿದೆ. ಹಿಂದಿನಿಂದ ಟ್ಯಾಂಕರ್ ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ಟ್ರ್ಯಾಕ್ಟರ್ ಸೇತುವೆಯಿಂದ ಕೆಳಕ್ಕೆ ಬಿದ್ದಿದೆ. ಪರಿಣಾಮ ಮಗು




ಸೇರಿ ಏಳು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಹಲವರಿಗೆ ಗಂಭೀರ ಗಾಯಗಳಾಗಿವೆ.

ಗಾಯಾಳುಗಳನ್ನು ಹೊಸಪೇಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ. ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ಅಥವಾ ಬೆಂಗಳೂರು ಆಸ್ಪತ್ರೆಗೆ ದಾಖಲಿಸುವ ಸಂಭವವಿದೆ. ಮಾಹಿತಿ ತಿಳಿಯುತ್ತಿದ್ದಂತೆ ಪುಟ 2ಕ್ಕೆ

### ರಾಜ್ಯಾದ್ಯಂತ 3 ದಿನ ಬಿರುಗಾಳಿ ಸಹಿತ ಮಳೆ

**ಬೆಂಗಳೂರು:** ರಾಜ್ಯದಾದ್ಯಂತ ಮುಂದಿನ 3 ದಿನ ಗುಡುಗು, ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇ 16ರಿಂದ 18ರ ವರೆಗೆ ದಕ್ಷಿಣ ಒಳನಾಡಿನ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಕರಾವಳಿ, ಉತ್ತರ ಒಳನಾಡು ಹಾಗೂ ಬೆಂಗಳೂರಿನಲ್ಲೂ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ.



ಹಾಸನ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ತುಮಕೂರು, ಚಿಕ್ಕಬಳ್ಳಾಪುರ, ಚಾಮರಾಜನಗರ, ಮಂಡ್ಯ, ರಾಮನಗರ, ಕೋಲಾರ ಸೇರಿದಂತೆ ಹಲವೆಡೆ ಗುಡುಗು, ಮಿಂಚು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಈ ವೇಳೆ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ನಿರೀಕ್ಷೆ ಇದೆ. ಪುಟ 2ಕ್ಕೆ

# ನೀಟ್ ಅಕ್ರಮ: ಮೂವರ ಬಂಧನ

**ಜೈಪುರ:** 2025ರಲ್ಲಿ ನೀಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಒಂದೇ ಕುಟುಂಬದ ಐವರು ಈಗ ಪ್ರಶ್ನೆ ಪತ್ರಿಕೆ ಸೋರಿಕೆ ಸೋರಿಕೆ ಪ್ರಕರಣದ ಆರೋಪಿಗಳಾಗಿದ್ದಾರೆ.

ನೀಟ್ ಪರೀಕ್ಷೆ ತೇರ್ಗಡೆಯಾಗಿದ್ದ ಒಂದು ವರ್ಷದ ಬಳಿಕ ಹಗರಣದಲ್ಲಿ ದಿನೇಶ್ ಮತ್ತು ಆತನ ಸಹೋದರ ಮಂಗಿಲಾಲ್, ಸೋದರಳಿಯ ವಿಕಾಸ್ ಅವರನ್ನು ಬಂಧಿಸಲಾಗಿದೆ.

ಬಿವಾಲ್ ಕುಟುಂಬದವರು ನಿಜಕ್ಕೂ ಪರೀಕ್ಷೆಯಲ್ಲಿ ಪಾಸ್ ಆಗಿದ್ದರೇ ಅಥವಾ ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳನ್ನು ಪಡೆಯಲು ನೀಟ್ ಪತ್ರಿಕೆ ಸೋರಿಕೆ ಜಾಲವನ್ನು ಬಳಸಿದ್ದರೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲರೂ 10 ಮತ್ತು 12ನೇ ತರಗತಿಯಲ್ಲಿ ಸರಾಸರಿ ಶ್ರೇಣಿಗಳನ್ನು ಗಳಿಸಿದ್ದಾರೆ.

ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸವಾಯಿ ಮಾಧೋಪುರ್ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದ ಮಂಗಿಲಾಲ್ ಮಗ ವಿಕಾಸ್, 10ನೇ ತರಗತಿಯಲ್ಲಿ ಶೇ.63 ಮತ್ತು 12ನೇ ತರಗತಿಯಲ್ಲಿ ಶೇ.55 ಅಂಕಗಳನ್ನು ಗಳಿಸಿದ್ದ. ನೀಟ್



2024ರಲ್ಲಿ 720ಕ್ಕೆ ಕೇವಲ 270 ಅಂಕಗಳನ್ನು ಗಳಿಸಿದ್ದ. ಸಿಕಾರ್‌ನ ಕೋಚಿಂಗ್ ಸಂಸ್ಥೆಯಲ್ಲಿ ನಡೆದ 46 ಪರೀಕ್ಷೆಗಳಲ್ಲಿ ಆತನ ಸರಾಸರಿ ಅಂಕಗಳು 384 ಆಗಿತ್ತು. ನೀಟ್ 2025ರಲ್ಲಿ ಶೇ.85.11 ಅಂಕಗಳನ್ನು ಗಳಿಸಿದ್ದ. ದೌಸಾ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದ ಮಂಗಿಲಾಲ್ ಅವರ ಮಗಳು ಪ್ರಗತಿ, 10 ನೇ ತರಗತಿಯಲ್ಲಿ ಶೇ.69 ಮತ್ತು 12 ನೇ ತರಗತಿಯಲ್ಲಿ ಶೇ.91 ಅಂಕಗಳನ್ನು ಗಳಿಸಿದ್ದಳು. ಪ್ರಗತಿ ನೀಟ್ 2025ರಲ್ಲಿ 89.08 ಅಂಕಗಳೊಂದಿಗೆ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಳು.

# ನಟ ದರ್ಶನ್‌ಗೆ 1 ವರ್ಷ ಜೈಲು ಫಿಕ್ಸ್

## ಇನ್ನೂ 1 ವರ್ಷ ಜಾಮೀನು ಅರ್ಜಿ ಸಲ್ಲಿಸುವಂತಿಲ್ಲ: ಸುಪ್ರೀಂ ಕೋರ್ಟ್ ಆದೇಶ

**ನವದೆಹಲಿ:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದ ಪ್ರಮುಖ ಆರೋಪಿ, ನಟ ದರ್ಶನ್ ಅವರಿಗೆ ಸುಪ್ರೀಂ ಕೋರ್ಟ್‌ನಲ್ಲಿ ಭಾರೀ ಹಿನ್ನಡೆಯಾಗಿದೆ. ಇನ್ನೂ ಕನಿಷ್ಠ ಒಂದು ವರ್ಷ ಜೈಲೂಟ ಅನಿವಾರ್ಯವಾಗಿದೆ.

ಒಂದು ವರ್ಷದೊಳಗೆ ವಿಚಾರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿದ ಕೋರ್ಟ್ ಅಲ್ಲಿಯವರೆಗೆ ಜಾಮೀನು ನೀಡಲು ನಿರಾಕರಿಸಿದೆ. ಈ ಆದೇಶದಿಂದ ಮುಂದಿನ ವರ್ಷ ಮೇ 15ರವರೆಗೆ ದರ್ಶನ್‌ಗೆ ಜೈಲಿನಲ್ಲಿ ರುವುದು ಅನಿವಾರ್ಯ.

ನ್ಯಾ.ಪರ್ದಿವಾಲಾ ಮತ್ತು ನ್ಯಾ. ವಿಜಯ್ ಬಿಷ್ಣೋಯಿ ಅವರ ಪೀಠದಲ್ಲಿ ಶುಕ್ರವಾರ ದರ್ಶನ್ ಸಲ್ಲಿಸಿದ ಜಾಮೀನು ಅರ್ಜಿಯ



ವಿಚಾರಣೆ ನಡೆಯಿತು. ವಿಚಾರಣೆ ಆರಂಭವಾಗುತ್ತಿದ್ದಂತೆ ದರ್ಶನ್ ಪರ ವಕೀಲರು, ಜೈಲಿನಲ್ಲಿ ದರ್ಶನ್ ಅವರನ್ನು ಕ್ವಾರಂಟೈನ್ ಸೆಲ್ ನಲ್ಲಿ ಇರಿಸಲಾಗಿದೆ. ಯಾರೊಂದಿಗೂ ಮಾತನಾಡಲು ಅವಕಾಶ ನೀಡುತ್ತಿಲ್ಲ ಪುಟ 2ಕ್ಕೆ

### ಸುಪ್ರೀಂ ಆದೇಶದಲ್ಲಿ ಏನಿದೆ?

ಮೇ 15ರಿಂದ ಒಂದು ವರ್ಷದೊಳಗೆ ವಿಚಾರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಸಾಧ್ಯವಾದರೆ ಪ್ರತಿ ದಿನ ವಿಚಾರಣೆ ನಡೆಸಿ ಪ್ರಕ್ರಿಯೆಯನ್ನು ವೇಗಗೊಳಿಸಬೇಕು.

ಒಂದು ವೇಳೆ ಒಂದು ವರ್ಷದ ಅವಧಿಯಲ್ಲಿ ವಿಚಾರಣೆ ಮುಗಿಯದಿದ್ದರೆ ಅಥವಾ ಟ್ರಯಲ್‌ನಲ್ಲಿ ಯಾವುದೇ ಪ್ರಗತಿ ಕಾಣದಿದ್ದರೆ, ಅರ್ಜಿದಾರರು ಮತ್ತೆ ಜಾಮೀನಿಗಾಗಿ ಅರ್ಜಿ ಸಲ್ಲಿಸಬಹುದು.

ಇನ್–ಚಾರ್ಜ್ ಕೋರ್ಟ್‌ನಲ್ಲಿ ವಿಚಾರಣೆ ತಡವಾಗುತ್ತಿರುವ ಹಿನ್ನೆಲೆಯಲ್ಲಿ, ಸೆಷನ್ಸ್ ಕೋರ್ಟ್‌ಗೆ ಹೊಸ ನ್ಯಾಯಾಧೀಶರನ್ನು ನಿಯೋಜಿಸಲು ಹೈಕೋರ್ಟ್‌ಗೆ ಸೂಚನೆ ನೀಡಲಾಗಿದೆ.

ಚಾರ್ಜ್ ಶೀಟ್‌ನಲ್ಲಿರುವ 272 ಸಾಕ್ಷಿಗಳ ಪೈಕಿ ಅತಿ ಪ್ರಮುಖವಾದ 60 ಸಾಕ್ಷಿಗಳ ವಿಚಾರಣೆಯನ್ನು ಪುಟ 2ಕ್ಕೆ

**ಮೊದಲ ಪುಟದಿಂದ**

## ಇಂಧನ ದರ ಏರಿಕೆ ಶಾಕ್

ದಿನನಿತ್ಯದ ಇಂಧನ ದರ ಪರಿಷ್ಕರಣೆ ಕ್ರಮವನ್ನು ಸರ್ಕಾರಿ ತೈಲ ಕಂಪನಿಗಳು ಬಹುತೇಕ ಸ್ಥಗಿತಗೊಳಿಸಿ ದ್ದವು. 2024ರ ಲೋಕಸಭೆ ಚುನಾವಣೆಗೆ ಮುನ್ನ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರ್‌ಗೆ ರೂ.2ರಷ್ಟು ಇಳಿಕೆ ಮಾಡಿತ್ತು. ಆದರೆ, ಮಧ್ಯಪ್ರಾಚ್ಯ ಯುದ್ಧದಿಂದ ಮತ್ತೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗಿರುವುದರಿಂದ ಈಗ ದರ ಹೆಚ್ಚಳ ಮಾಡಲಾಗಿದೆ. ತಜ್ಞರ ಅಭಿಪ್ರಾಯದಂತೆ ಮಧ್ಯಪ್ರಾಚ್ಯ ಸಂಘರ್ಷ ಇನ್ನಷ್ಟು ತೀವ್ರಗೊಂಡರೆ ಜಾಗತಿಕ ಕಚ್ಚಾ ತೈಲ ಬೆಲೆ ಮತ್ತಷ್ಟು ಏರಿಕೆಯಾಗಬಹುದು. ಅದರ ಪರಿಣಾಮವಾಗಿ ಭಾರತದಲ್ಲೂ ಇಂಧನ ದರ ಮತ್ತೆ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

## ಕಂಪ್ಯೂಟರ್ ಆಧಾರಿತ ನೀಟ್

ಅಕ್ರಮಗಳ ವಿಷಯದಲ್ಲಿ ನಾವು ಯಾವುದೇ ಕಾರಣಕ್ಕೂ ರಾಜಿಯಾಗುವುದಿಲ್ಲ. ಇದರಿಂದ ಮಕ್ಕಳು ತಮ್ಮ ಹಕ್ಕುಗಳಿಂದ ವಂಚಿರಾಗಲು ಬಿಡುವುದಿಲ್ಲ. ಈ ಪರೀಕ್ಷಾ ಮಾಫಿಯಾ ಬಹುದಿನಗಳಿಂದ ನಡೆಯುತ್ತಿದೆ. ಇದರ ವಿರುದ್ಧ ಹೋರಾಟ ನಡೆಸುತ್ತೇವೆ. ಇದರ ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿಯೂ ತಪ್ಪು ಮಾಹಿತಿ ಹರಡುತ್ತಿವೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಶಿಕ್ಷೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

## 3 ದಿನ ಬಿರುಗಾಳಿ ಸಹಿತ ಮಳೆ

ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕೊಪ್ಪಳ, ರಾಯಚೂರು, ಬೀದರ್, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮೇ 15ರಿಂದ ಮುಂದಿನ 3 ದಿನಗಳ ಕಾಲ ಅಲ್ಲಲ್ಲಿ ಗುಡುಗು, ಮಿಂಚು ಸಹಿತ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

## ಖಾಸಗಿ ಬಸ್ ದರವೂ ಹೆಚ್ಚಳ

ವಾಹನಗಳ ದರವೂ 10– 15ನಷ್ಟು ಏರಿಕೆಯಾಗಲಿದೆ. ಓಲಾ, ಉಬರ್ ದರ ಏರಿಕೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಸೋಮವಾರ ಚಾಲ ಕರ ಸಂಘದಿಂದ ಸಭೆ ನಡೆಯಲಿದೆ. ಸಭೆಯ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಲು ಸಿದ್ಧತೆ ನಡೆದಿದೆ. ಒತ್ತಡ ಹೇರಲು ತಯಾರಿ ನಡೆಸಿದೆ.

## ಮುಂದಿನ ಪರಿಣಾಮ ಏನು?

**ಸಾರ್ವಜನಿಕ ಸಾರಿಗೆ ಕ್ಷೇತ್ರಕ್ಕೂ ಈ ದರ ಏರಿಕೆ ಹೆಚ್ಚುವರಿ ಹೊರೆ ತರಲಿದೆ. ಇನ್ನೇನು ಮುಂಗಾರು ಆರಂಭವಾಗಲಿದೆ. ಬಿತ್ತನೆ, ಕಟಾವು ಕಾರ್ಯಕ್ಕಾಗಿ ಹೆಚ್ಚಿನ ರೈತರು ಈಗ ಯಂತ್ರಗಳನ್ನೇ ನಂಬಿಕೊಂಡಿದ್ದಾರೆ. ಈಗ ಇಂಧನಗಳ ಬೆಲೆ ಏರಿಕೆಯಾಗಿರುವುದು ರೈತರ ಕೆಲಸದ ಮೇಲೂ ದೊಡ್ಡ ಹೊಡೆತ ನೀಡಲಿದೆ. ರಾಸಯನಿಕ ಗೊಬ್ಬರ, ಯಂತ್ರಗಳ ಬಿಡಿ ಭಾಗಗಳ ಸಾಗಣೆ ವೆಚ್ಚವೂ ಏರುವುದರಿಂದ ಉತ್ಪನ್ನಗಳ ಬೆಲೆಯೂ ಪರಿಷ್ಕರಣೆಯಾಗುವ ಸಾಧ್ಯತೆಯಿದೆ.**

## ದರ್ಶನ್‌ಗೆ 1 ವರ್ಷ ಜೈಲು ಫಿಕ್ಸ್

ಕುಟುಂಬ ಸದಸ್ಯರನ್ನು ಭೇಟಿ ಮಾಡಲು ಕೇವಲ ಗ್ಲಾಸ್ ತಡೆಗೋಡೆ ಮೂಲಕ ಅವಕಾಶ ನೀಡಲಾ ಗುತ್ತಿದೆ. 9 ತಿಂಗಳಿನಿಂದ ಜೈಲಿನಲ್ಲಿದ್ದಾರೆ ಎಂದು ವಾದ ಮಂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಕ್ವಾರಂಟೈನ್ ಸೆಲ್ ಕೂಡ ಜೈಲಿನ ಒಂದು ಭಾಗವೇ ಆಗಿದೆ. ಸ್ಪೆಷಲ್ ಟ್ರೀಟ್ ಮೆಂಟ್ ಸಿಗಬಾರದು ಎಂಬ ಉದ್ದೇಶದಿಂದ ಅಲ್ಲಿ ಇರಿಸಿರಬಹುದು. ಜೈಲು ಮ್ಯಾನ್ಯುಯಲ್ ಪ್ರಕಾರ ಅಗತ್ಯ ಸೌಲಭ್ಯಗಳನ್ನು ನೀಡಲು ಸೂಚಿಸುತ್ತೇವೆ ಎಂದು ಆದೇಶಿಸಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಒಟ್ಟು 272 ಸಾಕ್ಷಿಗಳಿವೆ. ಈವರೆಗೆ ಕೇವಲ 10 ಸಾಕ್ಷಿಗಳ ವಿಚಾರಣೆ ಮಾತ್ರ ನಡೆದಿದೆ ಎಂದು ತಿಳಿಸಿದ ನ್ಯಾಯಪೀಠವು ವಿಚಾರಣೆ ವಿಳಂಬವಾಗುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತು. ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ದಾರ್ಥ ಲೂತ್ರಾ, 17 ಆರೋಪಿಗಳ ಪರ ವಕೀಲರು ಪಾಟಿಸವಾಲು ಮಾಡುವಾಗ ಒಂದೊಂದು ಸಾಕ್ಷಿಗೆ 5–6 ದಿನ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ವಿಳಂಬವಾಗುತ್ತಿದೆ ಎಂದ ಉತ್ತರಿಸಿದರು. ಇನ್ನೂ 172ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ಬಾಕಿ ಇರುವಾಗ ಇಷ್ಟು ಬೇಗ ಜಾಮೀನು ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ? ಟ್ರಯಲ್ ನಿಧಾನವಾಗಿರುವುದು ಸತ್ಯ ಎಂದು ಅಭಿಪ್ರಾಯಪಟ್ಟರು. ದರ್ಶನ್ ಪರ ವಕೀಲ ಮುಕುಲ್ ರೊಹಟಗಿ ಅವರ ವಾದ ಮತ್ತು ಸರ್ಕಾರದ ಪರ ವಾದಗಳನ್ನು ಆಲಿಸಿದ ನ್ಯಾಯಾಲಯ ಸದ್ಯಕ್ಕೆ ಅರ್ಹತೆ ಆಧಾರದ ಮೇಲೆ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿ ಕೆಲ ಮಹತ್ವದ ಆದೇಶ ನೀಡಿ ಜಾಮೀನು ಅರ್ಜಿಯನ್ನು ಇತ್ಯರ್ಥ ಮಾಡಿತು.

# ಬೇಸಿಗೆ ಶಿಬಿರದಿಂದ ಆತ್ಮವಿಶ್ವಾಸ



ಗುಂಡ್ಲುಪೇಟೆ: ತಾಲೂಕಿನ ಮದ್ದೂರಿನ ಬುಡಕಟ್ಟು ಕಾಲೋನಿಯಲ್ಲಿ ಮಕ್ಕಳ ಸರ್ವತೋಮುಖ ಏಳಿಗೆಗಾಗಿ ಶ್ರೀ ಸಾಯಿ ಗಿರಿಜನ ಪ್ರಗತಿ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ 15 ದಿನಗಳ ಬೇಸಿಗೆ ಶಿಬಿರವು ಇಂದು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಶಿಬಿರದ ಸಮಾರೋಪದ ಅಂಗವಾಗಿ ಮಕ್ಕಳಿಗೆ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಿಬಿರದ ಶಿಕ್ಷಕರು ಹಾಗೂ ಫೌಂಡೇಶನ್ ಅಧ್ಯಕ್ಷರಾದ ಡಾ. ರತ್ನಮ್ಮ, "ಮಕ್ಕಳಲ್ಲಿ ಉತ್ತಮ ಸಾಮಾಜಿಕ ನಡವಳಿಕೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸಲು ಬೇಸಿಗೆ ಶಿಬಿರಗಳು ಅತ್ಯುತ್ತಮ ವೇದಿಕೆಗಳಾಗಿವೆ. ಇಲ್ಲಿ ಸಮಾನ ವಯಸ್ಕರೊಂದಿಗೆ ಬೆರೆಯುವುದರಿಂದ ಮಕ್ಕಳಲ್ಲಿ ಸಂಕೋಚ ದೂರವಾಗಿ, ಸ್ವಂತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ವೃದ್ಧಿಯಾಗುತ್ತದೆ," ಎಂದು ತಿಳಿಸಿದರು.

ಕಳೆದ 15 ದಿನಗಳಿಂದ ನಡೆದ ಈ ಶಿಬಿರದಲ್ಲಿ ಮಕ್ಕಳಿಗೆ ಕಲೆ, ಚಿತ್ರಕಲೆ, ಕ್ರೀಡೆ, ಸಂಸ್ಕೃತಿ ಮತ್ತು ಶಿಕ್ಷಣದ ಕುರಿತು ವಿಶೇಷ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಯಿತು. ಈ ಚಟುವಟಿಕೆಗಳು ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಲಿವೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ದೊಡ್ಡಯ್ಯ, ಮಹದೇವಮ್ಮ, ಶಾರದಾ, ಲಕ್ಷ್ಮಿ ಹಾಗೂ ಕಾಲೋನಿಯ ಪೋಷಕರು ಮತ್ತು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಾಧನೆ ಮಾಡಿದ ಮಕ್ಕಳಿಗೆ ಪ್ರೋತ್ಸಾಹದಾಯಕ ಬಹುಮಾನಗಳನ್ನು ವಿತರಿಸಿ ಗೌರವಿಸಲಾಯಿತು.

# ಸಂಸ್ಥೆಯಿಂದ ಹಣ ದುರುಪಯೋಗ




ಮೈಸೂರು: ಹುಣಸೂರು ತಾಲ್ಲೂಕಿನ ರತ್ನಪುರಿ ಕಾಲೋನಿ ಸಾಧನಾಪುರದ ಸಿದ್ಧಿ ಕೇಂದ್ರದಲ್ಲಿರುವ ವಿಶ್ವಶಾಂತಿ ಶಿಕ್ಷಣ ಸಂಸ್ಥೆಯ ಓರ್ವರು ಸಂಸ್ಥೆಯ ಸುಮಾರು 40 ರಿಂದ 50 ಲಕ್ಷ ರೂ.ಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರೂ ಸಂಬಂಧಿಸಿದವರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕರ್ನಾಟಕ ರಾಜ್ಯ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖ್ಯಸ್ಥ ಹರಿಹರ ಆನಂದಸ್ವಾಮಿ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಹಿಂದೆ ಲಕ್ಕಪ್ಪ ಸ್ವಾಮೀಜಿಯವರು ಸಮಾಜ ಸೇವೆ ಉದ್ದೇಶದಿಂದ ಸರ್ಕಾರದಿಂದ 40 ರಿಂದ 45 ಎಕರೆ ಜಮೀನು ಮಂಜೂರು ಮಾಡಿಸಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದರು. ಆದರೆ ಅವರು ಕಾಲವಾಗುವುದನ್ನೇ ಕಾದಿದ್ದ ಓರ್ವರು ಸಂಸ್ಥೆಯ ಆಡಳಿತ ಆಕ್ರಮಿಸಿಕೊಂಡು ಈ ಎಲ್ಲ ಜಮೀನಿನಿಂದ ಬರುವ ಆದಾಯ ಹಾಗೂ ಶಿಕ್ಷಣ ಸಂಸ್ಥೆ ಪ್ರವೇಶಕ್ಕೆ ಮಕ್ಕಳು ಕಟ್ಟುವ ಹಣವನ್ನು ಗುಳುಂ ಮಾಡುತ್ತಿದ್ದಾರೆ. ಇವರ ಇಡೀ ಕುಟುಂಬವೇ ಸಂಸ್ಥೆಯನ್ನು ಆಕ್ರಮಿಸಿಕೊಂಡಿದೆ ಎಂದು ಆರೋಪಿಸಿದರು.

ಇದು ಅನುದಾನಿತ ಸಂಸ್ಥೆಯೂ ಆಗಿದೆ. ಹೀಗಿದ್ದರೂ ಸಹಾ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುವ ಶಿಕ್ಷಕರು ಹಾಗೂ ಸಿಬ್ಬಂದಿಯನ್ನು ಬೆದರಿಸಿ, ವಿವಿಧ ಕಾರಣಗಳಿಗಾಗಿ ಹಣ ಸುಲಿಗೆ ಮಾಡಲಾಗುತ್ತಿದೆ. ಸಂಸ್ಥೆಯ ಜಮೀನಿನಲ್ಲಿ ಬರುವ ತೆಂಗಿನ ಕಾಯಿ, ಎಳನೀರು, ಜಮೀನಿನ ಗುತ್ತಿಗೆ, ಮೈಸೂರು ನಗರದಲ್ಲಿರುವ ಜಾಗದಿಂದ ಬರುವ ಹಣ, ಇಟ್ಟಿಗೆ ವ್ಯಾಪಾರದ ಹಣ ಮೊದಲಾದವನ್ನು ಈ ವ್ಯಕ್ತಿ ಕಬಳಿಸುತ್ತಿದ್ದಾರೆ. ಹೀಗಾಗಿ ಸರ್ಕಾರ ಈ ಕೂಡಲೇ ತನಿಖೆ ನಡೆಸಿ ಸಂಸ್ಥೆಯ ಹಣ ಸಂಸ್ಥೆಗೆ ಹಾಗೂ ಬಡ ಮಕ್ಕಳ ಶಿಕ್ಷಣಕ್ಕೆ ಬಳಕೆ ಆಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ವೇದಿಕೆ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ವೇದಿಕೆಯ ಇನ್ನಿತರ ಮುಖಂಡರು ಹಾಗೂ ಹೋರಾಟಗಾರರಾದ ಅಹಿಂದ ಜವರಪ್ಪ, ರತ್ನಪುರಿ ಪುಟ್ಟಸ್ವಾಮಿ, ನಟರಾಜು ಶಿವಣ್ಣ ಹಾಗೂ ಪ್ರಜ್ವಲ್ ಇದ್ದರು.

# ಬಯೋ ಮೀಥನೈಜೇಷನ್ ಘಟಕ ಚಾಲನೆ

## ಹಸಿತ್ಯಾಜ್ಯ ನಿರ್ವಹಣೆ: 1 ಟನ್ ಸಾಮರ್ಥ್ಯ । ನಗರಸಭಾಧ್ಯಕ್ಷ ಕೆ.ಶೇಷಾದ್ರಿರಿಂದ ಚಾಲನೆ

ರಾಮನಗರ: ನಗರದ ಸ್ವಚ್ಚತೆಗೆ ಸಂಕಲ್ಪಿಸಿರುವ ಇಲ್ಲಿನ ನಗರಸಭೆ ನವೀಕರಿಸಿದ ಬಯೋ ಮೀಥೆನೈಜೇಷನ್ ಘಟಕಕ್ಕೆ ಶುಕ್ರವಾರ ಚಾಲನೆ ನೀಡಿದೆ. ನಗರ ವ್ಯಾಪ್ತಿಯ ಹೋಟೆಲ್, ಹಾಸ್ಟೆಲ್ ಮುಂತಾದೆಡೆ ಉಳಿದು ಹೋಗುವ ಆಹಾರವನ್ನು ಸಂಗ್ರಹಿಸಿ ಈ ಘಟಕದಲ್ಲಿ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸಲು ನಗರಸಭೆ ಮುಂದಾಗಿದೆ.

ಬಯೋ ಮೀಥೆನೈಜೇಷನ್ ಘಟಕಕ್ಕೆ ಚಾಲನೆ ನೀಡಿದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿ, ಬಯೋ ಮೀಥೆನೈಜೇಷನ್ ಘಟಕ ಹೊಸದಲ್ಲ. 10 ವರ್ಷಗಳ ಹಿಂದೆ ಸ್ಥಾಪಿಸಲಾಗಿತ್ತು. ಆದರೆ ನಿರ್ವಹಣೆ ಇಲ್ಲದೆ ಸ್ಥಗಿತಗೊಂಡಿತ್ತು. 5.40 ಲಕ್ಷ ರೂ ವೆಚ್ಚದಲ್ಲಿ ಈ ಘಟಕವನ್ನು ನವೀಕರಿಸಲಾಗಿದೆ. ಇದರ ಒಟ್ಟು ಸಾಮರ್ಥ್ಯ 1 ಟನ್. ಘಟದಿಂದ ಉತ್ಪಾದನೆಯಾಗುವ ಅನೀಲವನ್ನು ವಿದ್ಯುತ್‌ಚ್ಛಕ್ತಿಯನ್ನಾಗಿ ಪರಿವರ್ತಿಸಲಾಗುವುದು. 20 ರಿಂದ 30 ಬೀದಿ ದೀಪಗಳಿಗೆ ಈ ವಿದ್ಯುತ್ ಬಳಕೆಯಾಗಲಿದೆ ಎಂದರು.

ಘಟದಲ್ಲಿ ಬಯೋ ಅನೀಲ ಉತ್ಪಾದನೆಯಾದ ನಂತರ ಉಳಿಯುವ ತಿಳಿಯನ್ನು ಗೊಬ್ಬರವನ್ನಾಗಿ ಬಳಸಬಹುದಾಗಿದೆ. ಈ ಘಟಕದಿಂದ ಹಸಿ ತ್ಯಾಜ್ಯವನ್ನು ವಿಲೇವಾರಿ ಈಗ ಸುಲಭವಾಗಲಿದೆ ಎಂದು ಮಾಹಿತಿ ಕೊಟ್ಟರು.

### ಜನರ ಸಹಕಾರ ಇಲ್ಲದೆ ಸ್ವಚ್ಚತೆ ಅಸಾಧ್ಯ

ಇಂದೋರ್ ನಗರ ಹಲವಾರು ವರ್ಷಗಳಿಂದ ದೇಶದಲ್ಲಿ ನಂ 1 ಸ್ವಚ್ಛ ನಗರ ಎಂಬ ಖ್ಯಾತಿ ಪಡೆಯುತ್ತಿದೆ. ರಾಮನಗರಕ್ಕಿಂತ ಹಲವು ಪಟ್ಟು ದೊಡ್ಡದಾದ ಇಂದೋರ್ ನಗರಕ್ಕೆ ನಗರಸಭಾ ಸದಸ್ಯರು ಮತ್ತು ಅಧಿಕಾರಿಗಳು ಅಧ್ಯಯನ ಪ್ರವಾಸ ಕೈಗೊಳ್ಳಲಾಗಿತ್ತು. ಅಲ್ಲಿನ ನಗರದ ನಾಗರೀಕರೆ ಸ್ವಚ್ಚತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಕಡಲೆ ಕಾಯಿ ಮಾರುವ ವ್ಯಕ್ತಿಯೂ ಸ್ವಚ್ಚತೆ ಕಾಪಾಡಿ ಎಂದು ತನ್ನ ಗ್ರಾಹಕರಿಗೆ ತಿಳಿ ಹೇಳುವುದನ್ನು ಪ್ರವಾಸದ ವೇಳೆ ಗಮನಿಸಿದ್ದೆವು. ರಾಮನಗರ ನಗರಸಭೆಯ ಸಿಬ್ಬಂದಿ ಕೂಡ ನಿರಂತರವಾಗಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಎಸೆಯದೆ, ನಗರಸಭೆಯ ಕಸ ಸಂಗ್ರಹಣ ವಾಹನಕ್ಕೆ ಕೊಡ ಬೇಕು ಎಂದು ಸೂಚಿಸುತ್ತಿದ್ದಾರೆ. ಅತಿ ಹೆಚ್ಚಾಗಿ ಕಸವನ್ನು ಎಸೆಯುವ ರಸ್ತೆ ಬದಿಯ ಸ್ಥಳಗಳನ್ನು ಬ್ಲಾಕ್ ಸ್ಪಾಟ್‌ಗಳೆಂದು ಗುರುತಿಸಿ ನಗರಸಭೆ ಈಗಾಗಲ ಸದರಿ ಸ್ಥಳಗಳನ್ನು "ವೇಸ್ಟ್ ಟು ಆರ್ಟ್" ಶೀರ್ಷಿಕೆಯಡಿಯಲ್ಲಿ ಸುಂದರೀಕರಣಗೊಳಿಸಲಾಗಿದೆ. ನಗರಸಭೆಯ ಈ ಪ್ರಯತ್ನಗಳನ್ನು ನಾಗರೀಕರು ಗಮನಿಸಬೇಕು, ಸ್ವಚ್ಚ ರಾಮನಗರದ ಕಲ್ಪನೆಯ ಸಾಕಾರಕ್ಕೆ ಜನರು ಸಹಕರಿಸಬೇಕು ಎಂದು ಕೆ.ಶೇಷಾದ್ರಿ ಮಗದೊಮ್ಮೆ ಮನವಿ ಮಾಡಿದರು. ಎಲ್ಲರೂ ಸಂಕಲ್ಪಿಸಿದರೆ ರಾಮನಗರವನ್ನು ಸ್ವಚ್ಚ ಮತ್ತು ಮಾದರಿ ನಗರವನ್ನಾಗಿ ಪರಿವರ್ತಿಸುವುದು ಅಸಾಧ್ಯವೇನಲ್ಲ ಎಂದರು.



### ಇನ್ನು ಎರಡು ತಿಂಗಳಲ್ಲಿ ತ್ಯಾಜ್ಯ

### ಸಂಸ್ಕರಣಾ ಘಟಕ ಸಿದ್ದ – ಡಾ.ಜಯಣ್ಣ

ನಗರಸಭೆಯ ಆಯುಕ್ತ ಡಾ.ಜಯಣ್ಣ ಮಾತನಾಡಿ ನಗರದಲ್ಲಿ ದಿನನಿತ್ಯ 22 ಟನ್ ಹಸಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ಪೈಕಿ ಉಳಿಕೆ ಆಹಾರ ಪದಾರ್ಥಗಳು, ಕೊಳೆತ ಹಣ್ಣು ಮತ್ತು ತರಕಾರಿಗಳನ್ನು ಮಾತ್ರ ನವೀಕರಿಸಿರುವ ಬಯೋ ಮೀಥನೈಜೇಷನ್ ಘಟಕದಲ್ಲಿ ಬಳಕೆಯಾಗುವುದು. ಘಟದಿಂದ ಉತ್ಪಾದನೆಯಾಗುವ ಅನೀಲವನ್ನು ಅನೀಲವನ್ನಾಗಿಯೇ ಬಳಸಲು ಅವಕಾಶವಿದೆ. ಸದ್ಯಕ್ಕೆ ನಾವು ಅನೀಲದಿಂದ ವಿದ್ಯುತ್ ಉತ್ಪಾದಿಸಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

ಇನ್ನು ಎರಡು ತಿಂಗಳಲ್ಲಿ ಹರೀಸಂದ್ರ ಗ್ರಾಮದ ಬಳಿ ನಗರಸಭೆವತಿಯಿಂದ ನಿರ್ಮಾಣವಾಗುತ್ತಿರುವ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಚಾಲನೆ ದೊರೆಯಲಿದೆ ಎಂದರು.

ಈ ವೇಳೆ ನಗರಸಭೆಯ ಉಪಾಧ್ಯಕ್ಷರಾದ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮೊಹಮದ್ ಆರೀಫ್, ನಗರಸಭಾ ಸದಸ್ಯರುಗಳಾದ ಸೋಮಶೇಖರ್ (ಮಣಿ), ಪಾರ್ವತಮ್ಮ, ವಿಜಯಕುಮಾರಿ, ನಾಗಮ್ಮ, ಅಜ್ಮತ್, ರಮೇಶ್ ಮುಂತಾದವರು ಹಾಜರಿದ್ದರು.

### ಫುಡ್ ಸ್ಟ್ರೀಟ್ ಕಾಮಗಾರಿಗೆ ಚಾಲನೆ

**ಬಯೋ ಮೀಥನೈಜೇಷನ್ ಘಟಕಕ್ಕೆ ಚಾಲನೆ ಕೊಡುವ ಮುನ್ನ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರು ಪುಡ್ ಸ್ಟ್ರೀಟ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು. ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವವರಿಗೆ ಪುಡ್‌ಸ್ಟ್ರೀಟ್ ಕಲ್ಪನೆಯಂತೆ ಸ್ಥಳ ಮತ್ತು ವ್ಯವಸ್ಥೆಯ ಅಗತ್ಯವಿತ್ತು. ನಗರದ ಮೂಲಕ ಹಾದು ಹೋಗಿರುವ ಬೆಂಗಳೂರು–ಮೈಸೂರು ರಸ್ತೆಯ ಯೂನಿಲೆಟ್ ಮಾರಾಟ ಮಳಿಗೆಯ ಎದುರು ಆಹಾರ ಪದಾರ್ಥಗಳ ಮಾರಾಟದ ಮಳಿಗೆಗಳನ್ನು 45.90 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು. 50 ಮಳಿಗೆಗಳಿಗೆ ಅವಕಾಶವಾಗಲಿದೆ. ಟೆಂಡರ್ ಮೂಲಕ ಈ ಮಳಿಗೆಗಳನ್ನು ಬಾಡಿಗೆಗೆ ಕೊಡಲಾಗುವುದು ಎಂದು ತಿಳಿಸಿದರು.**



## ಇಂದು ಅಜ್ಞಾತವಾಸ ನಾಟಕ ಕೃತಿ ಬಿಡುಗಡೆ ಕಾರ್ಯಕ್ರಮ

ಮೈಸೂರಿನ ಸಾಂಸ್ಕೃತಿಕ ವೇದಿಕೆಯಲ್ಲಿ ನಾಳೆ ಅಂದರೆ ಮೇ 16ರ ಶನಿವಾರದಂದು ಒಂದು ವಿಶೇಷ ಸಾಹಿತ್ಯಿಕ ಸಂಭ್ರಮಕ್ಕೆ ಚಾಲನೆ ಸಿಗಲಿದೆ. ಕಲಾಸುರಚಿ ಹಾಗೂ ಅಪರಾಜಿತೆ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ, ಅಪರಾಜಿತೆ ಪ್ರಕಾಶನದ ಎಂಟನೇ ಕೊಡುಗೆಯಾಗಿ ಹಿರಿಯ ವಿಜ್ಞಾನಿ ಹಾಗೂ ಖ್ಯಾತ ಲೇಖಕರಾದ ಶ್ರೀಪಾಲಹಳ್ಳಿ ವಿಶ್ವನಾಥ್ ಅವರ 'ಅಜ್ಞಾತವಾಸ' ಎಂಬ ನಾಟಕ ಕೃತಿ ಲೋಕಾರ್ಪಣೆಯಾಗಲಿದೆ. ಈ ಸಡಗರದ ಕಾರ್ಯಕ್ರಮವು ಮೇ 15 ಸಂಜೆ 6 ಗಂಟೆಗೆ ಮೈಸೂರಿನ ಸುರುಚಿ ರಂಗಮನೆಯಲ್ಲಿ ನೆರವೇರಲಿದೆ.

### ಗಣ್ಯರ ಉಪಸ್ಥಿತಿಯಲ್ಲಿ ಕೃತಿ ಲೋಕಾರ್ಪಣೆ

ಈ ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಹರಿಪ್ರಸಾದ್ ಅವರು ವಹಿಸಲಿದ್ದಾರೆ. ಹೊಸ ಕೃತಿಯನ್ನು ಶ್ರೀ ಗಂಗಾಧರ ಸ್ವಾಮಿ ಅವರು ಅಧಿಕೃತವಾಗಿ ಬಿಡುಗಡೆಗೊಳಿಸಿ ಸಾಹಿತ್ಯ ಲೋಕಕ್ಕೆ ಸಮರ್ಪಿಸಲಿದ್ದಾರೆ. ಇನ್ನು ಈ ನಾಟಕದ ಹೂರಣ ಮತ್ತು ಶ್ರೀಪಾಲಹಳ್ಳಿ ವಿಶ್ವನಾಥ್ ಅವರ ಲೇಖನ ಶೈಲಿಯ ಕುರಿತು ವಿಮರ್ಶಾತ್ಮಕವಾಗಿ ಶ್ರೀ ಕೃಷ್ಣಮೂರ್ತಿ ಚಂದರ್ ಅವರು ಮಾತನಾಡಲಿದ್ದಾರೆ. ಸಾಹಿತ್ಯ ಮತ್ತು ವಿಜ್ಞಾನದ ನಡುವೆ ಸಮತೋಲನ ಕಾಯ್ದುಕೊಂಡಿರುವ ಲೇಖಕರ ಈ ಹೊಸ ಪ್ರಯತ್ನದ ಮೇಲೆ ಅವರು ಬೆಳಕು ಚೆಲ್ಲಲಿದ್ದಾರೆ.

### ಮಹಾಭಾರತದ ಪಾತ್ರಗಳಿಗೆ ಆಧುನಿಕ ದರ್ಶನ

'ಅಜ್ಞಾತವಾಸ' ನಾಟಕವು ಕೇವಲ ಪೌರಾಣಿಕ ಕಥೆಯ ಮರುಕಥನವಲ್ಲ, ಬದಲಿಗೆ ಇದರಲ್ಲಿ ಹಾಸ್ಯ, ಚುರುಕಾದ ವ್ಯಂಗ್ಯ ಹಾಗೂ ಮಾನವೀಯ ಸಂಬಂಧಗಳ ಸಂಕೀರ್ಣತೆಯನ್ನು ಒಳಗೊಂಡ ವಿಶಿಷ್ಟ ನಿರೂಪಣೆ ಇದೆ. ಮಹಾಭಾರತದ ಸುಪರಿಚಿತ ಪಾತ್ರಗಳನ್ನು ಹೊಸ ದೃಷ್ಟಿಕೋನ ಮತ್ತು ವಿಭಿನ್ನ ವಿಶ್ಲೇಷಣೆಯೊಂದಿಗೆ ಕಟ್ಟಿಕೊಡಲು ಕೃತಿಕಾರರು ಇಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಇಂದಿನ ಕಾಲಘಟ್ಟಕ್ಕೆ ಹೊಂದುವಂತಹ ವಿಶ್ಲೇಷಣೆಗಳು ಈ ನಾಟಕದ ಜೀವಾಳವಾಗಿವೆ.

### ರಂಗಪ್ರೇಮಿಗಳಿಗೆ ವಿಶೇಷ ರಸದೌತಣ

**ಪುಸ್ತಕ ಬಿಡುಗಡೆಯ ವಿಧ್ಯುಕ್ತ ಕಾರ್ಯಕ್ರಮ ಮುಗಿದ ತಕ್ಷಣ, ಕೃತಿಕಾರರ ಸಮ್ಮುಖದಲ್ಲೇ ಈ ನಾಟಕದ ವಾಚನ ಕಾರ್ಯಕ್ರಮವೂ ನಡೆಯಲಿದೆ. ಇದು ರಂಗಪ್ರೇಮಿಗಳಿಗೆ ನಾಟಕದ ಕಥಾವಸ್ತುವನ್ನು ನೇರವಾಗಿ ಅನುಭವಿಸಲು ಒಂದು ಉತ್ತಮ ಅವಕಾಶವಾಗಲಿದೆ. ಮೈಸೂರಿನ ಸಾಹಿತ್ಯಾಸಕ್ತರು, ರಂಗಭೂಮಿಯ ಒಲವುಳ್ಳವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ವೈಚಾರಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಆಯೋಜಕರು ವಿನಂತಿಸಿದ್ದಾರೆ**

**ಮೊದಲ ಪುಟದಿಂದ**

## ಟ್ರ್ಯಾಕ್ಟರ್ ಉರುಳಿ 7 ಸಾವು

ವಿಜಯನಗರ ಎಸ್ಪಿ ಜಾಹ್ನವಿ ಹಾಗೂ ಹೊಸಪೇಟೆ ಡಿವೈಎಸ್ಪಿ ಕೆಪಿ ಮುರಳೀಧರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## 'ಮಿಸ್ಟರ್ ಮೋದಿ' ಕೊಡುಗೆ:

ಎಂದು ಸವಾಲು ಹಾಕಿದರು. ಇದೇ ವೇಳೆ ಹೈಕಮಾಂಡ್‌ನಿಂದ ಬರಲಿರುವ ಸಿಹಿ ಸುದ್ದಿ ಅಥವಾ ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದೆ ಡಿ.ಕೆ.ಶಿವಕುಮಾರ್ ತೆರಳಿದರು.

## ಸಿಎನ್‌ಜಿ ಬೆಲೆಯೂ ಏರಿಕೆ

ವ್ಯತ್ಯಾಸ ಇರಲಿದೆ. ಆಟೋಗಳು, ಕ್ಯಾಬ್‌ಗಳು ವೆಚ್ಚ ಕಡಿಮೆ ಮಾಡಲು ಸಿಎನ್‌ಜಿ ಬಳಸುತ್ತವೆ. ಸಣ್ಣ ಲಾರಿಗಳು, ಟೆಂಪೋಗಳು ಮತ್ತು ಡೆಲಿವರಿ ವ್ಯಾನ್‌ಗಳು ಸಿಎನ್‌ಜಿ ಇಂಧನ ಬಳಸುತ್ತವೆ. ಸಿಎನ್‌ಜಿ ದರ ಏರಿಕೆಯಿಂದ ಈ ವಾಹನಗಳ ಬಾಡಿಗೆ ಏರಿಕೆಯಾಗಲಿದೆ.

## ಸುಪ್ರೀಂ ಆದೇಶದಲ್ಲಿ ಏನಿದೆ?

ಮೊದಲು ಪೂರ್ಣಗೊಳಿಸಬೇಕು. ಜೈಲು ಮ್ಯಾನ್ಯುಯಲ್ ಪ್ರಕಾರ ದರ್ಶನ್ ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಜೈಲು ಸೂಪರಿಂಟೆಂಡೆಂಟ್ ಒದಗಿಸಬೇಕು ಎಂದು ಆದೇಶಿಸಿದೆ.

# ಸರ್ಕಾರಿ ಶಾಲೆಗಳ ವಿಲೀನ ಖಂಡಿಸಿ ಪ್ರತಿಭಟನೆ




ಮೈಸೂರು: ತೀವ್ರ ವಿರೋಧದ ನಡುವೆಯೂ ಶಾಲೆಗಳ ವಿಲೀನ ಮುಂದುವರಿಸಿದ ರಾಜ್ಯ ಸರಕಾರದ ಹಠಮಾರಿ ಹಾಗೂ ಸರ್ವಾಧಿಕಾರಿ ಧೋರಣೆ ಖಂಡಿಸಿ ಎಐಡಿಎಸ್‌ಓ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ ರಾಜ್ಯ ಸರಕಾರ, ಸರಕಾರಿ ಶಾಲೆಗಳನ್ನು ವಿಲೀನಗೊಳಿಸುತ್ತಿದೆ. ಇದೀಗ ಪಿಎಂ ಶ್ರೀ ಶಾಲೆಗಳಿಗೆ ಕೂಡ ಸುತ್ತಲಿನ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಸರಕಾರ ಪಿಎಂಶ್ರೀ ಯೋಜನೆಯ ಹೆಸರಿನಲ್ಲಿ ರಾಜ್ಯದಾದ್ಯಂತ 317 ಶಾಲೆಗಳನ್ನು ವಿಲೀನ ಮಾಡಿಸಲು ಆದೇಶ ಹೊರಡಿಸಿದೆ. ಅಲ್ಲದೇ ಪಿಯು ಕಾಲೇಜುಗಳನ್ನು ಕೂಡ ವಿಲೀನಗೊಳಿಸಲಾಗುತ್ತಿದೆ ಎಂದು ಕಿಡಿಕಾರಿದರು. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ಅನೇಕ ಹಳ್ಳಿಗಳ ಶಾಲೆಗಳನ್ನು ವಿಲೀನಗೊಳಿಸುವ ಅಧಿಕೃತ ಪಟ್ಟಿ ಈಗಾಗಲೇ ಹೊರಬಿದ್ದಿದ್ದು, ಗ್ರಾಮಸ್ಥರಿಂದ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ಹಳ್ಳಕಟ್ಟೆ ಶಾಲೆಯ 58 ಮಕ್ಕಳನ್ನು, ಎಂವಿ ಹಟ್ಟಿಯ 28 ಮಕ್ಕಳನ್ನು, ಹಿರೇ ಸಾದರಹಳ್ಳಿಯ 34 ಮಕ್ಕಳನ್ನು ಹೊಳಲ್ಕೆರೆಯ 40 ಮಕ್ಕಳು ಹೀಗೆ 15 ಹಳ್ಳಿಗಳಲ್ಲಿ ಓದುತ್ತಿರುವ 305 ಮಕ್ಕಳನ್ನು ಡಿ.ಎಂ ಕುರ್ಕೆ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಸೇರಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ ಎಂದರು. ಪ್ರತಿಭಟನೆಯಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಸಲಹೆಗಾರ ಉಗ್ರನರಸಿಂ ಹೇಗೌಡ, ಉಪಾಧ್ಯಕ್ಷ ಹೆಜ್ಜಿಗೆ ಪ್ರಕಾಶ್, ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ನಿತಿನ್, ಪದಾಧಿಕಾರಿಗಳಾದ ಚಂದನ, ಚಂದ್ರಿಕಾ, ದಿಶಾ, ಅಂಜಲಿ, ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಸದಸ್ಯರಾದ ಸಂಧ್ಯಾ, ಸೀಮಾ, ಸುನಿಲ್, ಸುಮಾ, ಬಸವರಾಜು, ಆಸಿಯಾ ಬೇಗಂ, ನೀತುಶ್ರೀ, ಪೂರ್ಣಿಮಾ, ರಣಜಿತ್, ಪುಷ್ಪ, ಚಂದ್ರಶೇಖರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಬೇಸಿಗೆ ಶಿಬಿರದಿಂದ ಮಕ್ಕಳ ಆಂತರಿಕ ಜ್ಞಾನ ವಿಕಾಸ



ಗುಂಡ್ಲುಪೇಟೆ: ಬೇಸಿಗೆ ಶಿಬಿರಗಳು ಮಕ್ಕಳಲ್ಲಿನ ಪ್ರತಿಭೆಗಳನ್ನು ಅನಾವರಣಗೊಳಿಸುವುದರ ಜೊತೆಗೆ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿ ಅವರ ಅಂತರಿಕ ಜ್ಞಾನವನ್ನು ವಿಕಾಸ ಗೊಳಿಸುತ್ತದೆ ಎಂದು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಕೆ ಪಿ ಸತೀಶ್ ರವರು ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಊಟಿ ರಸ್ತೆ ಶಾಲೆಯ ಅವರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಏಪ್ರಿಲ್ 13ರಿಂದ ಮೇ 13ರವರಗೆ ನಡೆದ (ರಾಜಾ–ಮಜಾ ) ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ವಿದ್ಯಾರ್ಥಿಗಳಿಗೆ ಕಲಿಕೆ ಮತ್ತು ಶಾಲಾ ಪಠ್ಯಗಳನ್ನು ಓದುವುದರ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಕಲಿಸಬೇಕು ಇದರಿಂದ ಮಕ್ಕಳ ಮನಸ್ಸು ಉಲ್ಲಾಸದಿಂದ ಪ್ರತಿಯೊಂದು ವಿಚಾರದಲ್ಲೂ ಕಲಿಕೆ ಬಗ್ಗೆ ಆಸಕ್ತಿ ಹಾಗೂ ಅಭಿರುಚಿ ಮೂಡುತ್ತದೆ. ಮಕ್ಕಳೊಳಗೆ ಸೃಜನಶೀಲ ಅಭಿರುಚಿಗಳನ್ನು ಸೃಷ್ಟಿಸಲು ಇಂತಹ ಬೇಸಿಗೆ ಶಿಬಿರಗಳು ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಶಾಲೆಯ ಹಿರಿಯ ಮುಖ್ಯ ಶಿಕ್ಷಕರಾದ ದೊಡ್ಡ ಬಸವಯ್ಯನವರು ಮಾತನಾಡಿ ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ಸಾಮರ್ಥ್ಯ ಹೆಚ್ಚಿಸಿ ಸ್ಪರ್ಧಾತ್ಮಕ ಜಗತ್ತಿಗೆ ಮಕ್ಕಳನ್ನು ತಯಾರು ಮಾಡವ ಅವಕಾಶವನ್ನು ಬೇಸಿಗೆ ಶಿಬಿರಗಳು ಮಾಡುತ್ತವೆ. ಮಕ್ಕಳು ಈ ಬೇಸಿಗೆ ಶಿಬಿರದಲ್ಲಿ ಕಲಿತ ಚಟುವಟಿಕೆಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಕೆಇಬಿ ಇಂಜಿನಿಯರ್ ಹಾಗೂ ಗಾಯಕ ಮಯೂರ್ ವಿ ಮಾತನಾಡಿ ಈ ಬೇಸಿಗೆ ರಜೆಯ ಮೋಜಿನಲ್ಲಿ ಜೀವನಕ್ಕೆ ಬೇಕಾದ ಕೌಶಲಗಳನ್ನು ಕಲಿಸಿ ಮಜವನ್ನು ಇಮ್ಮಡಿಗೊಳಿಸುವ ಅದ್ಭುತವಾದ ಮಾರ್ಗ ಬೇಸಿಗೆ ಶಿಬಿರಗಳಾಗಿದ್ದು, ಸುಮ್ಮನೆ ಕಾಲಕಳೆಯುವ ಬದಲು ಬಗೆಬಗೆಯ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಿಕೊಳ್ಳಲು ಬೇಸಿಗೆ ಶಿಬಿರ ಒಂದೊಳ್ಳೆ ಅವಕಾಶ ಎಂದರು. ತಮ್ಮ ಗಾಯನದ ಮೂಲಕ ಮಕ್ಕಳನ್ನು ರಂಜಿಸಿದ್ದರು ಮುಖ್ಯ ಶಿಕ್ಷಕರಾದ ಸಿದ್ದಾರ್ಥ. ದೈಹಿಕ ಶಿಕ್ಷಕ ಸಿದ್ದಶೆಟ್ಟಿಯವರು ಕಾರ್ಯಕ್ರಮವನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಬಿ ಆರ್ ಸಿ ಮಣಿಕಂಠಚಾರಿ ಹಾಗೂ ಮಿಮಿಕ್ರಿ ರಾಜು ಪೋಷಕರು. ವಿದ್ಯಾರ್ಥಿಗಳು ಇದ್ದರು.

**ಈಶಿಬಿರಕ್ಕೆ ಶಾಸಕರಾದ ಎಚ್ ಎಂ ಗಣೇಶ್ ಪ್ರಸಾದ್ ರವರ ಪ್ರೇರಣೆ ಸುಮಾರು 150ಕ್ಕೂ ಹೆಚ್ಚು ಮಕ್ಕಳು ಉಚಿತ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದು ತುಂಬಾ ಸಂತೋಷದಾಯಕವಾಗಿತ್ತು ಮುಂದಿನ ದಿನಗಳಲ್ಲಿ ಬೇಸಿಗೆ ಶಿಬಿರಗಳಿಗೆ ಸ್ಪೂರ್ತಿದಾಯಕವಾಗಿದೆ ಎಂದರು. ಈ ಶಿಬಿರದಲ್ಲಿ ಕಲಿತ ಮೌಲ್ಯಗಳು ಖಂಡಿತ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.**

**ಮೋಹನ ಗುಂಡ್ಲುಪೇಟೆ**
ಶಿಬಿರದ ಶಿಕ್ಷಕರು

# ದೆಹಲಿಯಲ್ಲಿ ಮೇ23ರಿಂದ ಸಾಂಸ್ಕೃತಿಕ ಸಮ್ಮೇಳನ



ರಾಮನಗರ: ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿ ಅಂಗವಾಗಿ ಇದೇ ಮೇ 23 ರಿಂದ 25ರವರೆಗೆ ಮೂರು ದಿನಗಳ ಕಾಲ ಗಿರಿಜನ ಸಾಂಸ್ಕೃತಿಕ ಮಹಾ ಶೋಭಾ ಯಾತ್ರೆ ಹಾಗೂ ಸಾಂಸ್ಕೃತಿಕ ಸಮ್ಮೇಳನ ದೆಹಲಿಯಲ್ಲಿ ನಡೆಯಲಿದೆ ಎಂದು ಗಿರಿಜನ ಸುರಕ್ಷಾ ವೇದಿಕೆಯ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಸಂಯೋಜಕ ರಾಜು. ಎಸ್ ತಿಳಿಸಿದರು.

ದ್ದಾರೆ ನಗರದಲ್ಲಿ ನಡೆದ ಸುದ್ದಿಗೋಷ್ಟಿಯಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ 500 ಜನಜಾತಿಗಳ ಎಸ್‌ಟಿ ಸಮುದಾಯದ ಸುಮಾರು ಒಂದೂವರೆ ಲಕ್ಷ ಬುಡಕಟ್ಟು ಸಮುದಾಯದವರು ಪಾಲ್ಗೊಳ್ಳಲಿ ದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ಸುಮಾರು 102 ಮಂದಿ ಭಾಗವಹಿಸಲಿದ್ದಾರೆ ಎಂದರು.

**ಭಗವಾನ್ ಬಿರ್ಸಾ ಮುಂಡಾ ಜಯಂತಿ ಆಚರಣೆ**

ಅಂದು ಮಧ್ಯಾಹ್ನ 3 ಗಂಟೆಗೆ ದೆಹಲಿಯ ಐದು ಭಾಗಗಳಿಂದ ಭವ್ಯ ಶೋಭಾಯಾತ್ರೆ ಹೊರ ಡಲಿದೆ. ಇದರಲ್ಲಿ ಗಿರಿಜನರು ತಮ್ಮದೇ ಆದ ಉಡುಗೆ, ತೊಡುಗೆ, ವಾದ್ಯಗಳೊಂದಿಗೆ ಪಾಲ್ಗೊಳ್ಳ ಲಿದ್ದಾರೆ. ನಂತರ ಕೆಂಪು ಕೋಟೆ ಆವರಣದಲ್ಲಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ದೇಶದಲ್ಲಿ 700ಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳಿದ್ದು, ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ. ಬುಡಕಟ್ಟು ಸಮುದಾಯದ ಜನರಿಗೆ ಸಂವಿಧಾನ ಬದ್ಧವಾಗಿ ಹಲವು ಸೌಲಭ್ಯಗಳಿದ್ದರೂ, ಬುಡಕಟ್ಟು ಸಮುದಾ ಯದ ಜನರಿಗೆ ತಲುಪುತ್ತಿಲ್ಲ ಎಂದು ತಿಳಿಸಿದರು.

ಬುಡಕಟ್ಟು ಸಮುದಾಯದ ಜನರು ಅನುಭವಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸಂಘಟಿತ ಪ್ರಯತ್ನವಾದರೆ ಮಾತ್ರ ಸಮಸ್ಯೆಗಳು ಬಗೆಹರಿಯುತ್ತವೆ. 2006 ಅರಣ್ಯ ಹಕ್ಕು ಕಾಯ್ದೆ ಬಂದು ಒಂದು ದಶಕವೇ ಕಳೆದರೂ, ಅರಣ್ಯದಿಂದ ಹೊರಹಾಕಿದವರಿಗೆ ಇಂದಿಗೂ ಸಹ ಅರಣ್ಯ ಭೂಮಿ ಹಕ್ಕು ಪತ್ರ ನೀಡಿಲ್ಲ. ಬುಡಕಟ್ಟು ಜನಾಂಗದ ಕುಟುಂಬಗಳು ಗುಡಿಸಿಲಲ್ಲಿ ವಾಸವಾಗಿದ್ದಾರೆ ಸರಿಯಾದ ರೀತಿಯಲ್ಲಿ ಹಕ್ಕು ಪತ್ರ ಮತ್ತು ಮೂಲಭೂತ ಸೌಕರ್ಯ ಗಳನ್ನು ಒದಗಿಸಿಲ್ಲ ಎಂದರು.

ಗಿರಿಜನ ಸುರಕ್ಷಾ ವೇದಿಕೆಯ ಬೆಂಗಳೂರು ದಕ್ಷಿಣ ಜಿಲ್ಲೆಯ ಸಹ ಸಂಯೋಜಕ ಸತೀಶ್ ಆರ್.ಕೆ. ಮಾತನಾಡಿ, ಬುಡಕಟ್ಟು ಸಮುದಾಯದ ಜನರಿಗೆ ಕಳೆದ 75 ವ?ರ್ಗಗಳಿಂದ ಆಗುತ್ತಿರುವ ಅನ್ಯಾಯಕ್ಕೆ ರಾಷ್ಟ್ರೀಯ ಗಿರಿಜನರ ನೀತಿ ಮತ್ತು ಅಸ್ತಿತ್ವದ ದೆಸೆಯಲ್ಲಿ ಅಭಿವೃದ್ಧಿ ನೀತಿಯನ್ನು ನ್ಯಾಯಯುತ ಬೇಡಿಕೆಯಾಗಿ ಈಡೇರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸದಸ್ಯರಾದ ಸಿದ್ದಯ್ಯ, ಬರಿಯಪ್ಪ, ಕಾಮರಾಜು, ವಿನೋದ್ ಹಾಗೂ ಇತರರು ಇದ್ದರು.

# ವಾಟಾಳ್ ಕುರಿತ ಅವಹೇಳನೆಗೆ ಸೇನಾಪಡೆ ಖಂಡನೆ



ಮೈಸೂರು: ಮಂಡ್ಯದ ಕಾರ್ಯಕರ್ತ ಶಿವಕುಮಾರ್ ಆರಾಧ್ಯ ಎಂಬ ವ್ಯಕ್ತಿ ಕನ್ನಡ ಚಳುವಳಿ ಹೋರಾಟಗಾರ ವಾಟಾಳ್ ನಾಗರಾಜ್ ರನ್ನು ಅಯೋಗ್ಯ ವಾಟಾಳ್ ಎಂದು ಅವಹೇಳನಕಾರಿಯಾಗಿ ಮಾತನಾಡಿರುವ ಹೇಳಿಕೆಯನ್ನು ಖಂಡಿಸಿ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆವತಿಯಿಂದ ಪ್ರತಿಭಟನೆಯನ್ನು ನಡೆಸಲಾಯಿತು.

ವಾಟಾಳ್ ನಾಗರಾಜ್ ಕನ್ನಡ ನಾಡಿನ ನೆಲ ಜಲ ಭಾಷೆ ಪರವಾಗಿ ಕಳೆದ 7 ದಶಕಗಳಿಂದ, ಹೋರಾಟ ಮಾಡುವ ಮೂಲಕ ರಾಜ್ಯದಲ್ಲಿ ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ರಾಜ್ಯದಲ್ಲಿ ಕನ್ನಡ ನಾಡಿನ ವಿಚಾರಕ್ಕೆ ಏನೇ ಧಕ್ಕೆಯಾದರೂ ಮೊದಲು ಪ್ರತಿಭಟಿಸುವುದು ಇವರೇ. ಹಾಗೂ ವಿನೂತನವಾಗಿ ಚಳುವಳಿಗಳನ್ನು ನಡೆಸಿ ರಾಜ್ಯ, ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದರಲ್ಲಿ ಅತ್ಯಂತ ಯಶಸ್ವಿಯಾಗಿ ದ್ದಾರೆ. ಅಂತಹವರ ಹೋರಾಟ ಅವಹೇಳನಾ ಮಾಡುವುದು ಖಂಡ ನೀಯ ಎಂದರು. ಸೇನಾಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಗೋಲ್ಡನ್ ಸುರೇಶ್, ಪ್ರಜೀಶ್, ಸಿಂದುವಳ್ಳಿ ಶಿವಕುಮಾರ್, ಕೆ.ಎನ್.ನಾಗೇಗೌಡ, ಗಿರೀಶ್, ಡಾ.ಶಾಂತರಾಜೇಅರಸ್, ಮಧುವನ ಚಂದ್ರು, ಮಂಜುಳಾ, ತಾಯೂರು ಗಣೇಶ್, ಎಳನೀರು ರಾಮಣ್ಣ, ಸುಜಾತಾ, ಕುಮಾರ್, ದರ್ಶನ್ ಗೌಡ, ಪ್ರದೀಪ್, ಜ್ಯೋತಿ, ಹನುಮಂತಯ್ಯ, ಪ್ರಭಾಕರ, ಬಸವರಾಜು, ಶಿವರಾಂ ಗೌಡ, ನಾರಾಯಣ ಗೌಡ, ರಮೇಶ, ರವಿನಾಯಕ, ಮೂರ್ತಿ, ರವೀಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

# ಬೃಹತ್ ರಂಗೋಲಿಯ ಚಿತ್ರದಲ್ಲಿ ಡಿಕೆಶಿ

ಮೈಸೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸೇವಾದಳದಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹುಟ್ಟು ಹಬ್ಬದ ಅಂಗವಾಗಿ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಎದುರು ಬೃಹದಾಕಾರದಲ್ಲಿ ರಂಗೋಲಿಯಲ್ಲಿ ಡಿಕೆಶಿಯವರ ಚಿತ್ರವನ್ನು ಬಿಡಿಸಿ ಸಂಭ್ರಮಿಸಿದರು.

ಕಲಾವಿದ ಪುನೀತ್ ಅವರಿಂದ ಬರೋಬ್ಬರಿ 8ಸಾವಿರ ಚದರ ಅಡಿಯಲ್ಲಿ ಚಿತ್ರ ಬಿಡಿಸಿ ವಿಶೇಷವಾಗಿ ಹುಟ್ಟುಹಬ್ಬದ ಶುಭಾಶಯ ತಿಳಿಸಿದರು. ಈ ವೇಳೆ ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಎಂ.ಕೆ.ಅಶೋಕ್ ಇನ್ನಿತರರು ಇದ್ದರು.



ವರ್ತಮಾನ
ಜಾಹೀರಾತಿಗೆ ಉತ್ತಮ ಮಾಧ್ಯಮ

# ನಿಮ್ಹಾನ್ಸ್ ಆಸ್ಪತ್ರೆ ಸ್ಥಳಾಂತರಿಸಿ

## ರೈತರಿಂದ ಸಿಎಂ ಕಚೇರಿವರೆಗೆ ಪಾದಯಾತ್ರೆ ನಡೆಸಿ ಆಕ್ರೋಶ

ಮೈಸೂರು: ನಾವು ಅಭಿವೃದ್ಧಿ ವಿರೋಧಿಗಳಲ್ಲ. ಆದರೆ, ಹಸಿರಾದ ಭೂಮಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಬೇಡ ಸ್ಥಳಾಂತರಿಸಿ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಪರಿಸರವಾದಿ ಗುಡುಮಾದನಹಳ್ಳಿ ಯಿಂದ ಜಿಲ್ಲಾ ಪಂಚಾಯಿತಿಯ ಸಿಎಂ ಕಚೇರಿವರೆಗೆ ಪಾದಯಾತ್ರೆ ನಡೆಸಿ ಆಕ್ರೋಶ ಹೊರಹಾಕಿದರು.

ತಾಲೂಕಿನ ಗುಡುಮಾದನಹಳ್ಳಿಯಲ್ಲಿ ಯಾವುದೇ ಕಾರಣಕ್ಕೂ ನಿಮಾನ್ಸ್ ಆಸ್ಪತ್ರೆ ನಿರ್ಮಾಣ ಮಾಡಬಾರದೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟಿಸಿ ಗುಡುಮಾದನಹಳ್ಳಿ ಗ್ರಾಮದ ಸ.ನಂ.8, 60 ಮತ್ತು 68ರ 36 ಎಕರೆ ವಿಸ್ತೀರ್ಣದ ಪೈಕಿ 20 ಎಕರೆ ಜಮೀನನ್ನು ಸರ್ಕಾರ ನಿಮಾನ್ಸ್ ಆಸ್ಪತ್ರೆಗಾಗಿ ಮಂಜೂರು ಮಾಡಿದೆ. ಆದರೆ, ಈ ಸ್ಥಳ ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯವಲ್ಲ. ಇಲ್ಲಿ 80 ಕುಟುಂಬಗಳು ಕಳೆದ 60–70 ವರ್ಷಗಳಿಂದಲೂ ಸ್ವಾಧೀನಾನುಭವ ಹೊಂದಿ ಬೇಸಾಯ ಮಾಡುತ್ತಿವೆ. ತೆಂಗು ಇತರೆ ತೋಟಗಾರಿಕೆ ಫಸಲು ಮತ್ತು ವಾರ್ಷಿಕ 2 ಫಸಲು ಭತ್ತ ಬೆಳೆಯುತ್ತಿದ್ದಾರೆ. ಈ ಭೂಮಿ ಕೃಷಿಗೆ ಮಾತ್ರ ಯೋಗ್ಯವಾಗಿದ್ದು, ಯಾವುದೇ ಕಟ್ಟಡ ನಿರ್ಮಾಣ ಮಾಡಲು ಯೋಗ್ಯವಲ್ಲ. ಸರ್ಕಾರ ಈ ಜಮೀನಿನಲ್ಲಿ ತಲೆ–ತಲಾಂತರದಿಂದ ಸ್ವಾಧೀನಾನುಭವ ಹೊಂದಿ ರುವ ರೈತ ಕುಟುಂಬವನ್ನು ಒಕ್ಕಲೆಬ್ಬಿಸಲು ಮುಂದಾ ಗಿರುವುದು ಖಂಡನೀಯ ಎಂದು ಕಿಡಿಕಾರಿದರು.

ಮೈಸೂರಿನಲ್ಲಿ ನಿಮಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವುದು ಸ್ವಾಗತಾರ್ಹ. ಆದರೆ, ಸೂಕ್ತವಲ್ಲದ ಸ್ಥಳದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ನಮ್ಮ ವಿರೋಧವಿದೆ. ಮೈಸೂರು ತಾಲೂಕಿನ ಹೊಸಹುಂಡಿ ಗ್ರಾಮದ ಸ.ನಂ 44ರಲ್ಲಿ 48 ಎಕರೆ, ಚೋರನಹಳ್ಳಿ ಸ.ನಂ:20ರಲ್ಲಿ 10 ಎಕರೆ, ಹಡಜನ ಗ್ರಾಮದ ಸ.ನಂ 149ರಲ್ಲಿ 16 ಎಕರೆ, ವಾಜಮಂಗಲ ಗ್ರಾಮದ ಸ.ನಂ.96 ರಲ್ಲಿ 102 ಎಕರೆ ಸರ್ಕಾರಿ ಜಮೀನಿದೆ. ಅಲ್ಲದೆ ವರುಣಾ ಕ್ಷೇತ್ರದ ಇಮ್ಮಾವು ಗ್ರಾಮದಲ್ಲೂ ಜಮೀನಿದೆ. ಈ ಯಾವುದಾದರು ಒಂದು ಸ್ಥಳದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲಿ.



### 125 ದಿನಗಳಿಂದ ಪ್ರತಿಭಟನೆ

**ಕಳೆದ ಬಜೆಟ್ನಲ್ಲಿ ಮೈಸೂರಿನ ಹೊರಭಾಗದಲ್ಲಿ ಗೂಡುಮಾದನ ಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆಗೆ ಕಳೆದ ಬಜೆಟ್ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದರು. ಈ ಪ್ರದೇಶ ವರುಣ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ ಈ ಗೂಡುಮಾದನ ಹಳ್ಳಿ ಹಸಿರು ಪ್ರದೇಶ ಹಾಗೂ ಫಲವತ್ತಾದ ಭೂಮಿ ಹೊಂದಿದೆ. ಆದರಿಂದ ಬೇರೆ ಕಡೆ ನಿಮ್ಹಾನ್ಸ್ ಆಸ್ಪತ್ರೆ ಮಾಡಿ ಎಂದು ಸ್ಥಳೀಯ ರೈತರು ಕಳೆದ 125 ದಿನಗಳಿಂದ ಸ್ಥಳದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಈ ನಡುವೆ ಮುಖ್ಯಮಂತ್ರಿಗಳಿಗೂ ಪತ್ರ ಬರೆದಿದ್ದಾರೆ.**

ಮತ್ತೊಮ್ಮೆ ಪುನರ್ ಪರಿಶೀಲಿಸಿ ಗುಡುಮಾದನಹಳ್ಳಿ ಯಲ್ಲಿ ನಿಮಾನ್ಸ್ ಆಸ್ಪತ್ರೆಗೆ ಭೂಮಿ ಮಂಜೂರು ಮಾಡಿರುವುದನ್ನು ರದ್ದುಪಡಿಸಿ, ಹಸಿರು ವಲಯವನ್ನು ರಕ್ಷಿಸಿ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಸಂಯುಕ್ತ ಹೋರಾಟ ಕರ್ನಾಟಕದ ಯಶವಂತ್, ದಲಿತ ಸಂಘದ ಬೆಟ್ಟಯ್ಯ ಕೋಟೆ, ಆಲಗೂಡು ಶಿವಕುಮಾರ್, ಉಗ್ರನರಸಿಂಹೇಗೌಡ, ಪರಶುರಾಮೇಗೌಡ, ಸ್ಟ್ಯಾನ್ಲಿ, ಪರಶುರಾಮ್, ಎ. ಎಲ್.ಕೆಂಪೂಗೌಡ, ಭಾನುಮೋಹನ್, ಭಾನು ಪ್ರಶಾಂತ್, ಕಾಳಚನ್ನೇಗೌಡ, ಸವಿತಾ ಮಲ್ಲೇಶ್ವರ, ಹೊಸಕೋಟೆ ಬಸವರಾಜು, ನೇತ್ರಾವತಿ, ಪಿ. ಮರಂಕಯ್ಯ ಸೇರಿದಂತೆ ಹಲವರು ಭಾಗವಹಿಸಿದ್ದರು.

# 10ಲಕ್ಷ ಗೆದ್ದ ಬೆಂಗಳೂರಿನ ಸೆಲ್ಫ್ ಚಾರ್ಜಿಂಗ್ ಸ್ಕೂಟರ್



ಮೈಸೂರು: ಹೌದು ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಎನನ್ನೂ ಬೇಕಾದರೂ ಸಾಧಿಸಬಹುದು ಎಂಬುದನ್ನು ರಾಜ್ಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ತಂಡ ಸಾಬೀತು ಮಾಡಿದ್ದು, ಅದರಲ್ಲೂ ಬೆಂಗಳೂರಿನ ವಿದ್ಯಾರ್ಥಿಗಳ ತಂಡ ಒಂದೇ ಬೈಕ್‌ನಲ್ಲಿ ಪೆಟ್ರೋಲ್ ಹಾಗೂ ಚಾರ್ಜಿಂಗ್ ಎರಡನ್ನು ಬಳಸಬಹುದಾದ ತಂತ್ರಜ್ಞಾನವನ್ನು ಕಂಡು ಹಿಡಿದು 10 ಲಕ್ಷ ಬಹುಮಾನವನ್ನು ಗೆದ್ದು ಬೀಗಿದರು.

ಮೈಸೂರಿನ ಹೆಬ್ಬಾಳದಲ್ಲಿರುವ ಎಐ, ಡಿಜಿಟಲ್ ಮತ್ತು ಇಆರ್&ಡಿ ಕನ್ಸಲ್ಟಿಂಗ್ ಸೇವೆಗಳಲ್ಲಿ ಜಾಗತಿಕ ಮುಂಚೂಣಿಯಲ್ಲಿರುವ ಎಲ್&ಟಿ ಟೆಕ್ನಾಲಜಿ ಸರ್ವಿಸಸ್ ಸಂಸ್ಥೆಯು ಭಾರತದ ಡೀಪ್–ಟೆಕ್ ಎಂಜಿನಿಯ ರಿಂಗ್ ಸಾಮರ್ಥ್ಯವನ್ನು ಜಗತ್ತಿಗೆ ಸಾರುವ ಸಲುವಾಗಿ, ವಿದ್ಯಾರ್ಥಿ ಗಳಿಗಾಗಿ ಆಯೋಜಿಸಿದ್ದ ಟೆಕ್‌ಜಿಯಂಲ ನ ಒಂಬತ್ತನೇ ಆವೃತ್ತಿಯ ಎಂಜಿನಿಯರಿಂಗ್ ಸ್ಪರ್ಧಾ ವೇದಿಕೆಯಲ್ಲಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಇನ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ತಂಡ 'ನೆಕ್ಸ್ಟ ಜೆನ್ ಸೆಲ್ಫ್– ಚಾರ್ಜಿಂಗ್ ಹೈಬ್ರಿಡ್ ಸ್ಕೂಟರ್" ಪ್ರದರ್ಶಿಸಿ ಪ್ರಥಮ ಸ್ಥಾನ ದೊಂದಿಗೆ 10ಲಕ್ಷ ನಗದು ಬಹುಮಾನ ಪಡೆದುಕೊಂಡಿತು. ಬೆಂಗ ಳೂರಿನ ಆರ್‌ಎನ್‌ಎಸ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡದ ಟೆಟ್ರೋಬೋಟ್–ಮಾಡ್ಯುಲರ್ ರೋಬೋಟಿಕ್ ಆರ್ಮ್ ಯೋಜನೆಗೆ ದ್ವಿತೀಯ, ತಮಿಳುನಾಡಿನ ಪಿಎಸ್‌ಎನ್‌ಎ ಕಾಲೇಜ್ ಆಫ್ ಇಂಜಿನಿಯ ರಿಂಗ್ ಅಂಡ್ ಟೆಕ್ನಾಲಜಿ ತಂಡ ಏರಿಸ್– ಸ್ಟೆಬಿಲಿಟಿ ಸ್ಟಾರ್ಟ್ಸ್ ವಿತ್ ಕಂಫರ್ಟ್ ಯೋಜನೆಗೆ ತೃತೀಯ ಬಹುಮಾನ ಪಡೆದುಕೊಂಡವು.

ಸದರಿ ಸ್ಪರ್ಧೆಯಲ್ಲಿ 62,000ಕ್ಕೂ ಹೆಚ್ಚು ನೋಂದಣಿಯಾಗಿ, ದೇಶಾದ್ಯಂತ 540ಕ್ಕೂ ಹೆಚ್ಚು ಎಂಜಿನಿಯರಿಂಗ್ ಸಂಸ್ಥೆಗಳಿಂದ ಸ್ಪರ್ಧಿಗಳು ಹೆಸರು ನೋಂದಣಿ ಮಾಡಿದ್ದರು. ಅಂತಿಮವಾಗಿ 160 ನೊಂದಣಿಗಳನ್ನು ಫೈನಲ್ ಮಾಡಿ ಅಂತಿಮವಾಗಿ 34 ತಂಡಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ವೈದ್ಯಕೀಯ ರೋಗನಿರ್ಣಯಕ್ಕಾಗಿ ರೋಬೋಟಿಕ್ ಆಟೋಮೇಷನ್, ಎಐ–ಚಾಲಿತ ಬಹುಭಾಷಾ ವೀಡಿಯೋ ಲೋಕಲೈಸೇಷನ್, ಲೈವ್ ಎಐ ಕ್ಯಾಪ್ಶನಿಂಗ್ ವ್ಯವಸ್ಥೆಗಳು, ಸ್ಮಾರ್ಟ್ ಹೋಮ್ ಮಾನಿಟರಿಂಗ್ ಗಾಗಿ ವೈ–ಫೈ ಸೆನ್ಸಿಂಗ್ ಮತ್ತು ಸುರಕ್ಷಿತ ಕೈಗಾರಿಕಾ ಕಾರ್ಯಾಚರಣೆಗಳಿಗಾಗಿ ಅಡಾಪ್ಟಿವ್ ರೋಬೋ ಟಿಕ್ ಆರ್ಮ್ ಗಳು ಪ್ರಮುಖವಾಗಿದ್ದವು. ಪೀಪಲ್ಸ್ ಚಾಯ್ಸ್ ಅವಾರ್ಡ್: ಒಡಿಶಾದ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಎಜುಕೇಶನ್ ಆಂಡ್ ರಿಸರ್ಚ್– ಐಟಿಇಆರ್ ತಂಡ ರೂಪಿಸಿರುವ ಚಿರಂಜೀವಿ ಯೋಜನೆಗೆ ಸಾರ್ವಜನಿಕರಿಂದ ಅತ್ಯಧಿಕ ಮತಗಳು ಲಭಿಸಿ ಆಕರ್ಷಿಸಿದವು.

ಸಿಎಸ್‌ಐಆರ್ ಎನ್‌ಎಎಲ್ ನ ಹಿರಿಯ ವಿಜ್ಞಾನಿ ಹಾಗೂ ಪದ್ಮಶ್ರೀ ಪುರಸ್ಕೃತ ಡಾ.ಶುಭಾ ವಿ.ಅಯ್ಯಂಗಾರ್ ಸಮಾರಂಭದ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, "ಟೆಕ್‌ಜಿಯಂಲ ವೇದಿಕೆಯು ಎಂಜಿನಿಯರಿಂಗ್ ಆವಿಷ್ಕಾರದ ಭವಿಷ್ಯದ ಮೇಲೆ ಬೆಳಕು ಚೆಲ್ಲುವಂತಿದೆ. ಎಂದು ತಿಳಿಸಿದರು. ಎಲ್&ಟಿ ಟೆಕ್ನಾಲಜಿ ಸರ್ವಿಸಸ್ ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಹಣಕಾಸು ಅಧಿಕಾರಿ ರಾಜೀವ್ ಗುಪ್ತಾ ಮಾತನಾಡಿ, "ಭಾರತದ ಉದಯೋನ್ಮುಖ ಡೀಪ್– ಟೆಕ್ ಎಂಜಿನಿಯರಿಂಗ್ ಸಾಮರ್ಥ್ಯ ಮತ್ತು ನಮ್ಮ ಯುವ ಪ್ರತಿಭೆಗಳ ನಾವೀನ್ಯತೆಯ ಶಕ್ತಿ ಪ್ರದರ್ಶನಕ್ಕೆ ಟೆಕ್‌ಜಿಯಂಲ ಒಂದು ಪ್ರಬಲ ವೇದಿಕೆಯಾಗಿ ಹೊರಹೊಮ್ಮಿದೆ. ಕಳೆದ ಒಂಬತ್ತು ಆವೃತ್ತಿಗಳಲ್ಲಿ, ಈ ವೇದಿಕೆಯು ಶೈಕ್ಷಣಿಕ ಕ್ಷೇತ್ರ ಮತ್ತು ಕೈಗಾರಿಕೆಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ರಾಷ್ಟ್ರಮಟ್ಟದ ಅಪೂರ್ವ ಆವಿಷ್ಕಾರ ವ್ಯವಸ್ಥೆಯಾಗಿ ಬೆಳೆದಿದೆ. ಈ ವರ್ಷ ಪ್ರದರ್ಶಿಸಲಾದ ತಾಂತ್ರಿಕ ಪರಿಹಾರಗಳ ವ್ಯಾಪ್ತಿ ಮತ್ತು ಗುಣಮಟ್ಟವು ನಮ್ಮ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ ತಿಳಿಸಿದರು.

# ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಮೈಸೂರು: 100ಕ್ಕೂ ಹೆಚ್ಚು ಆಟೋ ಚಾಲಕರಿಗೆ ಸಮವಸ್ತ್ರ ವಿಚರಿಸಿ ನಂತರ ಚಾಮುಂಡಿ ಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಡಿ.ಕೆ.ಶಿವ ಕುಮಾರ್ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ವಿಭಿನ್ನವಾಗಿ ಹುಟ್ಟುಹಬ್ಬವನ್ನು ಡಿ.ಕೆ.ಶಿವ ಕುಮಾರ್ ಅವರ ಅಭಿಮಾನಿಗಳ ಬಳಗ ಆಚರಿಸಿತು.

ಕೆಪಿಸಿಸಿ ಸದಸ್ಯ ಜಿ.ಶ್ರೀನಾಥ್ ಬಾಬು ಮಾತ ನಾಡಿ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಯಾಗಿರುವ ಡಿ.ಕೆ.ಶಿವಕುಮಾರ್ ಎಂದರೆ ಕಾಂಗ್ರೆಸ್ ಕಾರ್ಯಕರ್ತರ ಒಂದು ಶಕ್ತಿ. ನಾವು ಅವರ ಬಲ ದಿಂದಲೇ ಇಂದು ರಾಜ್ಯದಲ್ಲೆಡೆ ವಿದ್ಯಾರ್ಥಿಗಳು ಮತ್ತು ಯುವಕರು ಪ್ರತಿಭಟನೆ ಚಳುವಳಿ ಸತ್ಯಾಗ್ರಹದಂತ ಹೋರಾಟ ಮಾಡುವ ಮನೋಭಾವನೆ ಬಂದಿದೆ. ಅವರು ಕೇವಲ ರಾಜಕೀಯವಾಗಿ ಅಲ್ಲದೆ ಸಾಮಾ ಜಿಕವಾಗಿ ಸಾಕಷ್ಟು ಕೆಲಸ ಮಾಡುತ್ತಾ ಬಂದಿದ್ದಾ ರೆಂದು ಅವರ ಸಾಮಾಜಿಕ ಕಾರ್ಯ ಸ್ಮರಿಸಿದರು.

ಜಿ.ರಾಘವೇಂದ್ರ, ಕೃಷ್ಣ, ನಾಗರಾಜ್ ಸುರೇಶ್, ಮಂಜೇಶ್, ಕಿರಣ್, ಯೋಗೇಶ್, ಹರೀಶ್ ನಾಯ್ಡು, ರಮೇಶ್, ಪ್ರಸನ್ನ, ಸಂತೋಷ್ ಕಿರಾಳು, ಕಿಶೋರ್, ಅರುಣ್, ಶಣ್ಮುಖಾ ಹಾಜರಿದ್ದರು.

# ಗಡಿನಾಡು ರಕ್ಷಣಾ ಸೇನೆ ಪದಾಧಿಕಾರಿಗಳ ನೇಮಕ



ಗುಂಡ್ಲುಪೇಟೆ: ಗಡಿನಾಡು ರಕ್ಷಣಾ ಸೇನೆ ವತಿಯಿಂದ ಸಂಘದ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು.

ಪಟ್ಟಣದ ಹಳೆ ಪವಾಸಿ ಮಂದಿರದ ಬಳಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು ರಾಜ್ಯ ಗೌರವಾಧ್ಯಕ್ಷರಾಗಿ ಅರ್ ಡಿ ಉಲ್ಲಾಸ್,ರಾಜ್ಯ ಯುವ ಘಟಕದ ಅಧ್ಯಕ್ಷರು ಇಲಿಯಾಸ್ ಅಹ ಮದ್ ರಾಜ್ಯ ಉಪಾಧ್ಯಕ್ಷರಾಗಿ ಅಲಿಂ ಪಾಷಾ, ರಾಜ್ಯ ಯುವ ಘಟಕದ ಕಾರ್ಯದರ್ಶಿಯಾಗಿ ರಾಜು, ಜಿಲ್ಲಾಧ್ಯಕ್ಷರಾಗಿ ಮುತ್ತಣ್ಣ, ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷರಾಗಿ ಅಬ್ದುಲ್ ರಶೀದ್, ಗುಂಡ್ಲುಪೇಟೆ ಟೌನ್ ಘಟಕದ ಅಧ್ಯಕ್ಷರಾಗಿ ವಿಜಯ್ ಗಡಿನಾಡು ರಕ್ಷಣಾ ಸೇನೆಯ ರಾಜ್ಯ ಸಂಸ್ಥಾಪಕ ಅಧ್ಯಕ್ಷ ಮುನೀರ್ ಪಾಷಾ ನೇಮಕಾತಿ ಪತ್ರ ವಿತರಣೆ ಮಾಡಿದರು. ರಾಜ್ಯ ಸಂಸ್ಥಾಪಕ ಅಧ್ಯಕ್ಷ ಮುನಿರ್ ಪಾಷ ಮಾತನಾಡಿ, ನಾಡು ನುಡಿ ಜಲಕ್ಕಾಗಿ ನಾವು ಗಡಿನಾಡ ರಕ್ಷಣಾ ಸೇನೆಯನ್ನು ಸಂಸ್ಥಾಪನೆ ಮಾಡಿದ್ದು ನಾಡು ನುಡಿ ಜಲಕ್ಕಾಗಿ ನಾವು ಸದಾ ಸಿದ್ದರಿರಬೇಕು ಎಂದು ತಿಳಿಸಿದರು. ಕಾರ್ಯಕ್ರಮ ದಲ್ಲಿ ಸಾಹಿತಿ ಕಾಳಗಸ್ವಾಮಿ ಸಿದ್ದಾರ್ಥ, ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ರಮೇಶ್ ನಾಯಕ್. ಎಂ ಸಾಧಿಕ್,ನವೀನ್ ಕುಮಾರ್ ಸೇರಿದಂತೆ ಇತರೆ ಪದಾಧಿಕಾರಿಗಳು ಹಾಜರಿದ್ದರು.

# ರಮ್ಮನಹಳ್ಳಿಯಲ್ಲೇ ಮುಖ್ಯಕಚೇರಿ

ಮೈಸೂರು: ರಮ್ಮನಹಳ್ಳಿಯಲ್ಲಿಯೇ ಮುಖ್ಯ ಕಚೇರಿಯನ್ನು ಮುನ್ನಡೆ ಸುವಂತೆ ಸಂಬಂಧಿಸಿದ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಸೂಚಿಸುವುದಾಗಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ರಮ್ಮನಹಳ್ಳಿ ಗ್ರಾಮಸ್ಥರ ಸಮಸ್ಯೆ ಆಲಿಸಿ ಪ್ರತಿಕ್ರಯಿಸಿದ ಅವರು, ಪಟ್ಟಣ ಪಂಚಾಯಿತಿ ಕೇಂದ್ರದಲ್ಲೇ ಕಾರ್ಯ ನಿರ್ವಹಿಸಲಿದೆ. ತೆರಿಗೆ ಇನ್ನಿತರೇ ವಿಚಾರಗಳಿಗೆ ಶಾಖೆ ತೆರೆ ಯಲು ಅವಕಾಶ ಇರಲಿದೆ. ಎಂದರು. ಸ್ಥಳೀಯ ಗ್ರಾಮಸ್ಥರು ಪಟ್ಟಣ ಪಂಚಾಯಿತಿಯಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಮುಖ್ಯಾಧಿಕಾರಿ ಮಹೇಶ್ ಹಾಗೂ ಕಂದಾಯ ನಿರೀಕ್ಷಕ ಮಂಜುನಾಥ್ ಕಚೇರಿಯಲ್ಲಿ ಇರುವುದಿಲ್ಲ. ಖಾತೆ, ತೆರಿಗೆ ಇತ್ಯಾದಿ ಸಮಸ್ಯೆಗಳ ಬಗ್ಗೆ ಅಲೆದಾಡಿಸುತ್ತಿರುವ ಬಗ್ಗೆ ದೂರಿದರು. ಇದಕ್ಕೆ ಶೀಘ್ರ ಸಮಸ್ಯೆ ಬಗೆಹರಿಸುವುದಾಗಿ ಹೇಳಿದರು. ಈ ಸಂಧರ್ಭ ಶಾಸಕ ಜಿ.ಡಿ.ಹರೀಶ್ ಗೌಡ, ರಮ್ಮನಹಳ್ಳಿ ಗ್ರಾಮದ ಮುಖಂಡರಾದ ಮಹದೇವು, ವೆಂಕಟಯ್ಯ, ನಾಗರಾಜು, ರಾಜಶೇಖರ, ಆಡಿಟರ್ ಸುರೇಶ, ಶ್ರೀಕಾಂತ ಅರಸು, ಮಂಜು, ಗೋವಿಂದ ಇನ್ನಿತರರು ಹಾಜರಿದ್ದರು.



### ಬೆಂಗಳೂರಿನಲ್ಲಿ ರಾಜ್ಯಮಟ್ಟದ ಕಾರ್ಯಕ್ರಮ

# ಮೇ.31ರಂದು ವಿಶ್ವಕರ್ಮ ಮಕ್ಕಳ ಪ್ರತಿಭಾ ಪುರಸ್ಕಾರ

ಚಾಮರಾಜನಗರ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾವು ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಿಶ್ವಕರ್ಮ ಮಕ್ಕಳ ಪ್ರತಿಭಾ ಪುರಸ್ಕಾರವನ್ನು ಮೇ.31 ರಂದು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಜಿಲ್ಲಾಧ್ಯಕ್ಷ ಮಂಜುನಾಥಚಾರಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಧ್ಯಕ್ಷರಾದ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರ ಸಾರಥ್ಯದಲ್ಲಿ ವಿಶ್ವಕರ್ಮ ಮಠಾಧೀಶರ ಮತ್ತು ಸ್ವಾಮಿಜೀಗಳ ದಿವ್ಯಸಾನಿಧ್ಯದಲ್ಲಿ ವಿಶ್ವಕರ್ಮ ಸಮಾಜದ ಮುಖಂಡರುಗಳ ಮಾರ್ಗದರ್ಶನದಲ್ಲಿ 2025–26ನೇ ಸಾಲಿನ

ಎಸ್ ಎಸ್‌ಎಲ್ ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.75 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದ ಸಮುದಾಯದ ಮಕ್ಕಳಿಗೆ ಮಹಾಸಭಾದ ವತಿಯಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದ್ದು



ಅಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಟೌನ್ ಹಾಲ್ ನಲ್ಲಿರುವ ಪುಟ್ಟಣ್ಣ ಚೆಟ್ಟಿ ಭವನದಲ್ಲಿ ನಡೆಯಲಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈಗಾಗಲೇ ನಮ್ಮ ಸಮಾಜದ ವಾಟ್ಸಪ್ ಗ್ರೂಪ್ ಗಳಲ್ಲಿ ನೂಂದಣಿ ಅರ್ಜಿಯ ಪ್ರತಿಯನ್ನು ಹಾಕಲಾಗಿದೆ. ಅರ್ಜಿಯನ್ನು ಡೌನ್ ಲೋಡ್ ಮಾಡಿ ತಮ್ಮ–ತಮ್ಮ ಅಂಕಪಟ್ಟಿ,

ಟಿ.ಸಿ ಅಥವಾ ಜಾತಿ ಪ್ರಮಾಣ ಪತ್ರದ ದಾಖಲಾತಿಗಳು ಮತ್ತು ಭರ್ತಿ ಮಾಡಿದ ಪ್ರತಿಭ– ಪುರಸ್ಕಾರ ನೂಂದಣಿ ಅರ್ಜಿ ಫಾರಂನ್ನು ಸಕ್ಯಾನ್ ಮಾಡಿ ಅದರ ಸಕ್ಯಾನ್ ಕಾಪಿಯನ್ನು ಸುಂದರ್ ಜಿ, ಬೆಂಗಳೂರು ಅವರ ಮೊ.ಸಂಖ್ಯೆ 9886423935ಗೆ ವಾಟ್ಸ್ ಆಪ್ ಮುಖಾಂತರ ಕಳಿಹಿಸಿಕೊಡಬೇಕು ಎಂದರು.

ಚಾಮರಾಜನಗರ ಜಿಲ್ಲೆ ಪ್ರತಿಯೊಂದು ತಾಲ್ಲೂಕು, ಹೊಬಳಿ ಮತ್ತು ಗ್ರಾಮಗಳಲ್ಲಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಗಳು ಇದರ ಸದುಪಯೋಗವನ್ನು ಪಡೆದು ಕೂಳ್ಳುಬೇಕು.750 ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಈಗಾಗಲೇ 500 ಅರ್ಜಿಯನ್ನು ಬಂದಿದ್ದು, ಅದ್ದರಿಂದ ಅದಷ್ಟು ಬೇಗ ಚಾಮರಾಜನಗರ ಜಿಲ್ಲೆಯಲ್ಲಿರುವ ವಿಶ್ವಕರ್ಮ ಸಮಾಜದ ಮಕ್ಕಳು ಕೂಡ ಅರ್ಜಿಯನ್ನು ಹಾಕ ಬೇಕು. ರಾಜ್ಯದ್ಯಾಂತ ಇರುವ ವಿಶ್ವಕರ್ಮ ಸಮಾಜ ಭಾಂದವರ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ನಾಗೇಂದ್ರ ವಿಶ್ವಕರ್ಮ, ಯುವ ಘಟಕದ ತಾಲೂಕು ಅಧ್ಯಕ್ಷ ವೈ.ಬಿ.ಸ್ವಾಮಿ, ಯಳಂದೂರು ತಾಲೂಕು ಅಧ್ಯಕ್ಷ ಎ.ಎನ್.ನಾಗರಾಜು, ಚಂದಕವಾಡಿ ಹೋಬಳಿ ಅಧ್ಯಕ್ಷ ಕೆಂಪರಾಜು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

### ಅರ್ಜಿ ಆಹ್ವಾನ

**ಮಂಡ್ಯ:–** ಮಂಡ್ಯ ನಗರದ ಆಶೋಕನಗರದಲ್ಲಿ ಆನೆ ಪಾರ್ಕ್ ಬಾಲಭವನದಲ್ಲಿ ಮಕ್ಕಳ ಕಾರ್ಯಕ್ರಮ/ ಚಟುವಟಿಕೆಗಳನ್ನು ಸುಸೂತ್ರವಾಗಿ ನಡೆಸಲು ಕಾರ್ಯಕ್ರಮ ಸಂಯೋಜಕರು ಹಾಗೂ ಕಛೇರಿ ಸಹಾಯಕರನ್ನು ಮಾಸಿಕ ಗೌರವಧನ ಪಾವತಿ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ನೇಮಕಾತಿಗೆ 18 ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

**ಹುದ್ದೆಗಳ ವಿವರ:** ಕಾರ್ಯಕ್ರಮ ಸಂಯೋಜಕರ ಹುದ್ದೆಗೆ ಯಾವುದಾದರು ಪದವಿ ಹಾಗೂ ಕಂಪ್ಯೂಟರ್ ಜ್ಞಾನದ ಜೊತೆಗೆ ಸೃಜಾನಾತ್ಮಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳ ಯಾವುದಾದರು ಕಲಾಕ್ಷೇತ್ರದಲ್ಲಿ ಕೌಶಲ್ಯ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು

ಕಛೇರಿ ಸಹಾಯಕರು ಹುದ್ದೆಗೆ ಪಿ.ಯು.ಸಿ ಮತ್ತು ಮೇಲ್ಪಟ್ಟ ವಿದ್ಯಾರ್ಹತೆಯೊಂದಿಗೆ ಕಂಪ್ಯೂಟರ್ ಜ್ಞಾನ ಹೊಂದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು

ಆಸಕ್ತ ವಿದ್ಯಾರ್ಹತೆಯುಳ್ಳ ವ್ಯಕ್ತಿಗಳು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಛೇರಿಯಿಂದ ಅರ್ಜಿ ಪಡೆದು ಜೂನ್ 06 ರಂದು ಸಂಜೆ 4 ಗಂಟೆಯೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗೆ ದೂ. ಸಂ: 9449300822 ಅನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮೇ.17 ರಂದು ವಿದ್ಯುತ್ ವ್ಯತ್ಯಯ

**ಮಂಡ್ಯ:** 66/11 ಕೆ.ವಿ. ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಮೇ.17 ರಂದು ಬೆಳಿಗ್ಗೆ 09 ರಿಂದ ಸಂಜೆ 6 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದ ನಗರ ಪ್ರದೇಶಗಳಾದ ಸುಭಾಷ್‌ನಗರ, ಆಶೋಕ ನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರು ನಗರ, ಹೊಸಹಳ್ಳಿ, ದ್ವಾರಕನಗರ, ಗಾಂಧಿನಗರ, NGO?S layout , ಶ್ರೀ ರಾಮ ನಗರ, ಕಾವೇರಿ ನಗರ 1 & 2 ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ. ಕ್ಯಾತುಂಗೆರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ. ಹುಲಿಕೆರೆ, ಬಿ.ಹುಲಿಕೆರೆ. ಮತ್ತು ಐ.ಪಿ ಮಾರ್ಗಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜಿಲ್ಲಾ ಚಾವಿಸನಿನಿ, ಕಾ ಮತ್ತು ಪಾ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

**ರಾಮನಗರ:** ರಾಮನಗರ ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ಬಡಜನರು ಮತ್ತು ವಿಕಲಚೇತನರ ವರ್ಗಕ್ಕೆ ಸೇರಿದ ಅರ್ಹ ಫಲಾನುಭವಿಗಳಿಂದ 2026–27ನೇ ಸಾಲಿನ (ಶೇ.24.10, 7.25 ಮತ್ತು 5) ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮದಲ್ಲಿ ಕಾಯ್ದಿರಿಸಲಾಗಿರುವ ಅನುದಾನಕ್ಕೆ ಷರತ್ತುಗಳನ್ವಯ ವ್ಯಕ್ತಿಗತ ಸವಲತ್ತುಗಳನ್ನು ನೀಡಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಅರ್ಹರು ರಾಮನಗರ ನಗರಸಭೆಯ ಟಪಾಲು/ಸಾರ್ವಜನಿಕರ ಕುಂದು ಕೊರತೆ ದೂರು ವಿಭಾಗದಲ್ಲಿ ಕಚೇರಿ ಸಮಯದಲ್ಲಿ ಅರ್ಜಿ ಪಡೆದು, ಅಗತ್ಯ ದಾಖಲಾತಿಗಳೊಂದಿಗೆ 2026ರ ಜೂನ್ 15ರಂದು ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು. ನಿಗಧಿತ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿ /ಅಪೂರ್ಣ ದಾಖಲೆಗಳುಳ್ಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಮನಗರ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಗಸ್ಟ್ ಅಂತ್ಯದೊಳಗೆ ಕಾಮಗಾರಿ ಮುಗಿಸಿ ಡೀಸಿ ಡಾ.ಕುಮಾರ ಸೂಚನೆ

# ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗೆ ಹೈಟೆಕ್ ಸ್ಪರ್ಶ

**ಮಂಡ್ಯ:** ನಗರದ ಗುತ್ತಲುಯತ್ತಗದಹಳ್ಳಿ ಕೆರೆಗೆ ತ್ಯಾಜ್ಯ ನೀರು ಸೇರುವುದನ್ನು ತಡೆಗಟ್ಟಲು ನಿರ್ಮಿಸಲಾಗುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಉನ್ನತೀಕರಣ ಕಾಮಗಾರಿಗಳನ್ನು ಆಗಸ್ಟ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅಧಿಕಾರಿಗಳಿಗೆ ಸೂಚಿಸಿದರು.




ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಗುತ್ತಲು ಹಾಗೂ ಚಿಕ್ಕೇಗೌಡನದೊಡ್ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಉನ್ನತೀಕರಣ ಮತ್ತು ನಗರದಲ್ಲಿನ ಅಪೂರ್ಣ ಒಳಚರಂಡಿ ಪೈಪ್‌ಲೈನ್ ಕಾಮಗಾರಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ತ್ಯಾಜ್ಯ ನೀರು ಕೆರೆಗಳಿಗೆ ಸೇರುತ್ತಿರುವ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತರು ಸ್ಥಳ ಪರಿಶೀಲನೆ ನಡೆಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವುದಾಗಿ ತಿಳಿಸಿದ ಅವರು, ಕೆರೆ ಅಭಿವೃದ್ಧಿಯ ಜೊತೆಗೆ ತ್ಯಾಜ್ಯ ನೀರು ಸೇರ್ಪಡೆ ತಡೆಯುವ ಉದ್ದೇಶದಿಂದ ಗುತ್ತಲು ಮತ್ತು ಚಿಕ್ಕೇಗೌಡನದೊಡ್ಡಿ ಬಳಿ ನಿರ್ಮಿಸಿರುವ ಘಟಕಗಳನ್ನು ಉನ್ನತೀಕರಿಸಲಾಗುತ್ತಿದೆ ಎಂದರು.

ಗುತ್ತಲುಯತ್ತಗದಹಳ್ಳಿ ಬಳಿಯ ಘಟಕವು 9.52 ಎಂಎಲ್ಡಿ ಹಾಗೂ ಚಿಕ್ಕೇಗೌಡನದೊಡ್ಡಿ ಘಟಕವು 8.90 ಎಂಎಲ್ಡಿ ಸಾಮರ್ಥ್ಯ ಹೊಂದಿದ್ದು, ರಾಷ್ಟ್ರೀಯ ಹಸಿರು ನ್ಯಾಯಪೀಠದ ಪರಿಹಾರ ನಿಧಿಯಿಂದ ಸರ್ಕಾರ 30 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಂಡಿದೆ ಎಂದು ವಿವರಿಸಿದರು.

ಮದ್ದೂರು ನಗರಸಭೆ ವ್ಯಾಪ್ತಿಯ ಚಾಮನಹಳ್ಳಿ ಆಶ್ರಯ ಬಡಾವಣೆಯಲ್ಲಿ ವಿಕೇಂದ್ರೀಕೃತ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕಾಗಿ ಬಳಸಿದ ನೀರು ನಿರ್ವಹಣೆ ಯೋಜನೆಯಡಿ 115 ಲಕ್ಷ ರೂ. ಅನುದಾನ ನಿಗದಿಯಾಗಿದೆ ಎಂದು ತಿಳಿಸಿದರು. ಯೋಜನಾ ಸಮಾಲೋಚಕರು ಸ್ಥಳ ಪರಿಶೀಲನೆ ಹಾಗೂ ಸರ್ವೇ ಕಾರ್ಯ ಪೂರ್ಣಗೊಳಿಸಿ ಡಿಪಿಆರ್ ಅನ್ನು ಕೆಯುಐಡಿಎಫ್‌ಸಿಗೆ ಸಲ್ಲಿಸಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಶೀಘ್ರ ಕಾಮಗಾರಿ ಆರಂಭಿಸುವಂತೆ ಸೂಚಿಸಿದರು.

ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ ಕೈಬಿಟ್ಟಿರುವ ಒಳಚರಂಡಿ ಮಾರ್ಗಗಳ ಪುನರ್ ಸ್ಥಾಪನೆ, ವೆಟ್‌ವೆಲ್ ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಪುನಶ್ಚೇತನಕ್ಕಾಗಿ 25 ಕೋಟಿ ರೂ. ವೆಚ್ಚದ ಡಿಪಿಆರ್ ಸಿದ್ಧಪಡಿಸಿ ಸಲ್ಲಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿ ಶೀಘ್ರ ಆರಂಭಗೊಳ್ಳಬೇಕು ಎಂದರು. ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಕೆಯುಐಡಿಎಫ್‌ಸಿ ಯೋಜನೆಗಳ ನ್ಯೂನ್ಯತೆಗಳನ್ನು ಸರಿಪಡಿಸಿ, ಎಸ್‌ಟಿಪಿಗೆ ಸೆಪ್ಟಿಕ್ ಟ್ಯಾಂಕ್ ತ್ಯಾಜ್ಯ ಸಾಗಿಸಲು ಅಗತ್ಯ ಸಕ್ಕಿಂಗ್ ಯಂತ್ರ ಹಾಗೂ ಸಿಬ್ಬಂದಿ ನಿಯೋಜಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಪಾಂಡವಪುರ ಪುರಸಭೆ ವ್ಯಾಪ್ತಿಯ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿ ಆರಂಭವಾಗಬೇಕಿದೆ ಎಂದು ತಿಳಿಸಿದರು.

ಮಳವಳ್ಳಿ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆಯ ಒಟಿಐಟಿಕೆ ಪೂರ್ಣಗೊಳಿಸುವುದು, ವೆಟ್‌ವೆಲ್ ಮತ್ತು ಎಸ್‌ಟಿಪಿ ಉನ್ನತೀಕರಣಕ್ಕಾಗಿ 711 ಲಕ್ಷ ರೂ. ಡಿಪಿಆರ್ ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿ ಆರಂಭಿಸಬೇಕು ಎಂದರು.

ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಬಳಸಿದ ನೀರು ನಿರ್ವಹಣೆ ಯೋಜನೆಯಡಿ 1812 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ ಒಟಿಐಟಿಕೆ ಮತ್ತು ನಾಲ್ಕು ವೆಟ್‌ವೆಲ್ ನಿರ್ಮಾಣ ಕಾಮಗಾರಿಯನ್ನು ಸಿ.ವಿ.ಕೆ. ಕನ್‌ಸ್ಟ್ರಕ್ಷನ್ ಸಂಸ್ಥೆಗೆ ವಹಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಟಿ.ಎನ್.ನರಸಿಂಹಮೂರ್ತಿ, ಕಾರ್ಯಪಾಲಕ ಎಂಜಿನಿಯರ್ ಪ್ರತಾಪ್, ನಗರಸಭೆ ಪೌರಾಯುಕ್ತ ಯು.ಪಿ.ಪಂಪಶ್ರೀ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೀಸಲಾತಿ ಶೇ.56ಕ್ಕೆ: 9ನೇ ಶೆಡ್ಯೂಲ್ ಸೇರಿಸಲು ಒತ್ತಾಯ




**ಮಂಡ್ಯ:** ರಾಜ್ಯದ ಎಸ್ಸಿ, ಎಸ್ಟಿ ಮತ್ತು ಓಬಿಸಿ ಮೀಸಲಾತಿಯನ್ನು ಶೇ.56ಕ್ಕೆ ಉರ್ಜಿತಗೊಳಿಸಲು ಕೇಂದ್ರ ಸರ್ಕಾರವು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ರಾಜ್ಯದ ಎಲ್ಲಾ ಪಕ್ಷಗಳ ನಾಯಕರು ಒತ್ತಡ ಹೇರುವಂತೆ ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷ ಹಾಗೂ ಲೋಕಸಭಾ ಮಾಜಿ ಸದಸ್ಯ ವಿ.ಎಸ್. ಉಗ್ರಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೆರೆಯ ತಮಿಳುನಾಡು ರಾಜ್ಯವು ಇದೇ ರೀತಿಯಲ್ಲಿ ಕೇಂದ್ರದ ಮೇಲೆ ಒತ್ತಡ ಹೇರಿ ಎಸ್ಸಿ, ಎಸ್ಟಿ ಮೀಸಲಾತಿಯನ್ನು ಹೆಚ್ಚಿಸಿಕೊಂಡಿದೆ. ರಾಜ್ಯ ಸರ್ಕಾರವು ಕೂಡಲೇ ಸರ್ವಪಕ್ಷಗಳ ನಿಯೋಗವನ್ನು ಕರೆದೊಯ್ದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಶೇ.56ರ ಮೀಸಲಾತಿ ಕಾಯ್ದೆಯನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ಹಾಗೂ ಸಂವಿಧಾನದ ಅನುಚ್ಛೇದ 15 ಮತ್ತು 16ಕ್ಕೆ ತಿದ್ದುಪಡಿ ತಂದು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಒತ್ತಾಯಿಸಬೇಕು ಎಂದು ಹೇಳಿದರು.

ಮೀಸಲಾತಿಯಲ್ಲಿ ಎಸ್ಸಿಗೆ ಶೇ.17, ಎಸ್ಟಿಗೆ ಶೇ.7 ಮತ್ತು ಓಬಿಸಿಗೆ ಶೇ.32 ಮೀಸಲಾತಿ ನೀಡುವ ನಿರ್ಧಾರವನ್ನು ಬಸವರಾಜ ಬೊಮ್ಮಾಯಿ ಸರ್ಕಾರ 2023ರ ಮಾರ್ಚ್ 22ರಂದು ಸರ್ವಪಕ್ಷಗಳ ಅನುಮೋದನೆ ಪಡೆದಿತ್ತು. ಆದರೆ, ಜಾರಿಗೆ ಮುಂದಾದಾಗ ಹೈಕೋರ್ಟ್ ತಡೆ ನೀಡಿರುವುದರಿಂದ ರಾಜ್ಯ ಸರ್ಕಾರವು ಸಮರ್ಪಕವಾದ ವಾದ ಮಂಡಿಸಿ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ಹೇಳಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೀಸಲಾತಿ ಕಾಯ್ದೆಯನ್ನು 9ನೇ ಶೆಡ್ಯೂಲ್‌ಗೆ ಸೇರಿಸುವಂತೆ 2026ರ ಏಪ್ರಿಲ್ 16ರಂದು ಪ್ರಧಾನಮಂತ್ರಿಗೆ ಪತ್ರ ಬರೆದಿರುವುದನ್ನು ಉಲ್ಲೇಖಿಸಿದ ಅವರು, ರಾಜ್ಯದ ಎಲ್ಲಾ ಪಕ್ಷಗಳು ರಾಜಕೀಯ ಲಾಭದತ್ತ ನೋಡುವುದನ್ನು ಬಿಟ್ಟು ಜನರ ಹಿತಕ್ಕಾಗಿ ಅನುಮೋದನೆ ತಂದು ಮೀಸಲಾತಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ, ಓಬಿಸಿಯ ಕೆಲವು ಜಾತಿಗಳನ್ನು ಎಸ್ಸಿಗೆ ಸೇರಿಸುವ ಪ್ರಸ್ತಾಪದ ಕುರಿತು ಮಾತನಾಡಿದ ಅವರು, ಅಂತಹ ಕ್ರಮ ಕೈಗೊಳ್ಳುವ ಮೊದಲು ಸಂಬಂಧಿತ ಜಾತಿಗಳ ಕುಲಶಾಸ್ತ್ರ ಅಧ್ಯಯನ ನಡೆಸಿ, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್, ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದ ರಾಜ್ಯಾಧ್ಯಕ್ಷ ಟಿ.ಆರ್. ತುಳಸೀರಾಮ್, ದೇವರಾಜು, ಮಂಜುನಾಥ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.


## ಡಾ.ಡಿ.ಸಿ.ನಂಜುಂಡ ರಚನೆಯ ಎರಡು ಕೃತಿಗಳ ಬಿಡುಗಡೆ

**ಮೈಸೂರು:** ಅಂತರ್ಗತ ಬೆಳವಣಿಗೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಹೊರ ತಂದಿರುದ ಡಾ.ಡಿ.ಸಿ.ನಂಜುಂಡ ಅವರು ರಚಿಸಿರುವ ಆಪರೇಷನ್ ಸಿಂಧೂರ ಹಾಗೂ ಸಿಂಧೂ ನದಿ ಒಪ್ಪಂದ– ಆಳ ಮತ್ತು ಅಗಲ ಶೀರ್ಷಿಕೆಯ 2 ಕೃತಿಗಳನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಕೀಲೆ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ ಡಾ.ಹೇಮಾ ನಂದೀಶ್ ಬಿಡುಗಡೆಗೊಳಿಸಿದರು.



ಬಳಿಕ ಮಾತನಾಡಿ, ಈ ಎರಡೂ ವಿಷಯಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ದೊರೆತರೂ ಮನಸ್ಸಿಗೆ ಮುಟ್ಟುವ ರೀತಿಯಲ್ಲಿರುವುದಿಲ್ಲ. ಹೀಗಾಗಿ ಈ ಎರಡೂ ಕೃತಿಗಳು ಸಾಹಿತ್ಯ ಲೋಕಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ. ದೇಶದ ಸಮಗ್ರತೆ, ರಕ್ಷಣೆ, ಮಹಿಳೆಯರ ಸಿಂಧೂರಕ್ಕೆ ಅಪಮಾನವಾದಾಗ ಅಂದಿನ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಕೈಗೊಂಡ ದಿಟ್ಟ ನಿರ್ಧಾರ, ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ ಎಂದರು.

## ವಿಪ್ರೋತ್ಸವ ಮೇ 17ರಂದು: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆ ಪ್ರಶಸ್ತಿ ಪ್ರದಾನ



**ಮಂಡ್ಯ:** ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ವತಿಯಿಂದ ವಿಪ್ರೋತ್ಸವ ಕಾರ್ಯಕ್ರಮವನ್ನು ಮೇ 17ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾ ಬ್ರಾಹ್ಮಣ ಸಭಾದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಶ್ರೀಪತಿ ಭಾರಧ್ವಾಜ್ ತಿಳಿಸಿದರು.

ಸುದಿದಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಸಂಘದ ರಾಜ್ಯಾಧ್ಯಕ್ಷ ಜಿ.ಆರ್.ಪ್ರದೀಪ್ ಉದ್ಘಾಟಿಸುವರು. ಜಿಲ್ಲಾಧ್ಯಕ್ಷ ಶ್ರೀಪತಿ ಭಾರಧ್ವಾಜ್ ಅಧ್ಯಕ್ಷತೆ ವಹಿಸುವರು ಎಂದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಗೌರವಾಧ್ಯಕ್ಷ ಬೆಳ್ಳೂರು ಶಿವರಾಮು, ಮಂಡ್ಯ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಜಿಲ್ಲಾಧ್ಯಕ್ಷ ಬಿ.ಪಿ.ಮಧುಸೂಧನ, ಮಾಧ್ಯ ಸಂಘಟನೆಯ ಅಧ್ಯಕ್ಷ ಸದಾಶಿವ ಭಟ್, ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಜೋಶಿ, ಯುವ ಘಟಕದ ರಾಜ್ಯಾಧ್ಯಕ್ಷ ಕಾರ್ತಿಕ್ ಸೋಮಯಾಜಿ ಭಾಗವಹಿಸುವರು ಎಂದು ಹೇಳಿದರು.

ನೃತ್ಯಚೇತನ ಕಲಾಶಾಲೆಯ ನಿರ್ದೇಶಕಿ ಎಂ.ಎಸ್.ಬಿಂದುರಾವ್ ಅವರಿಂದ ಭರತನಾಟ್ಯ, ಹಾಸ್ಯನಟ ಮಂಡ್ಯ ಸತ್ಯ ಅವರಿಂದ ಹಾಸ್ಯ–ಲಾಸ್ಯ ಕಾರ್ಯಕ್ರಮಗಳನು ನಡೆಯಲಿವೆ. ವೇದಗುರು ಶ್ರೀಅನಂತ ನಾರಾಯಣ ಶಾಸ್ತ್ರಿ, ಶ್ರೀಕೃಷ್ಣ ಮಂಡಳಿಯ ಅಧ್ಯಕ್ಷೆ ಪ್ರೇಮ ರಾಮಚಂದ್ರ ಹಂದೆ ಅವರಿಗೆ ಭಾರ್ಗವ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷೆ ಎಸ್.ಜಿ.ಭಾರತೀಬಾಬು, ಚೇತನ್, ಮಮತ, ರಮೇಶ್, ವೀಣಾಗಣೇಶ್, ಮುರಳಿ ಇದ್ದರು.

## ನಾರಾಯಣ ಅವರಿಗೆ ವಿಧಾನ ಪರಿಷತ್ ಸದಸ್ಯರನ್ನಾಗಿ ನಾಮನಿರ್ದೇಶನಕ್ಕೆ ಒತ್ತಾಯ

**ಮಂಡ್ಯ:** ಮೈಸೂರು ಮಾಜಿ ಮಹಾಪೌರರು ಹಾಗೂ ಪೌರಕಾರ್ಮಿಕರ ಮಹಾಸಂಘದ ರಾಜ್ಯಾಧ್ಯಕ್ಷರಾದ ನಾರಾಯಣ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕು ಎಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ ಹಾಗೂ ಪೌರಸಭೆ ಪೌರಕಾರ್ಮಿಕರ ಸಂಘದ ರಾಜ್ಯ ಕಾರ್ಯದರ್ಶಿ ಮಧೂರು ಶ್ರೀನಿವಾಸ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸಫಾಯಿ ಕಾರ್ಮಿಕ ಸಮುದಾಯದ ಸಾಲಪ್ಪ ಅವರು 1970–80ರ ದಶಕದಲ್ಲಿ ಶಾಸಕರಾಗಿದ್ದರು. ನಂತರ ರಾಜ್ಯವನ್ನು ಆಳಿದ ಕಾಂಗ್ರೆಸ್ ಸೇರಿದಂತೆ ಯಾವುದೇ ಪಕ್ಷಗಳು ಈ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ನೀಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಸರ್ಕಾರಿ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ 70 ಸಾವಿರಕ್ಕೂ ಹೆಚ್ಚು ಮಂದಿ ಮತ್ತು ಖಾಸಗಿ ವಲಯಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಮಂದಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಸಮಸ್ಯೆಗಳ ಬಗ್ಗೆ ಮಾತನಾಡುವವರಿಲ್ಲದ ಕಾರಣ ನಾರಾಯಣ ಅವರನ್ನು ಕಾಂಗ್ರೆಸ್ ಸರ್ಕಾರ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಮಾಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಅಧ್ಯಕ್ಷ ರಂಗಸ್ವಾಮಿ, ಎಂ. ಗಣೇಶ್, ಶಂಕರ್, ಲಕ್ಷ್ಮಣಮೂರ್ತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ನಟ ಎಸ್. ಎಸ್. ಪುಟ್ಟೇಗೌಡರಿಗೆ ರಂಗರತ್ನ ಪ್ರಶಸ್ತಿ

**ಹಾಸನ:** ಅರಕಲಗೂಡು ತಾ. ಶಂಭುನಾಥಪುರದ ಎಸ್. ಎಸ್. ಪುಟ್ಟೇಗೌಡರು ರಂಗನಟರಾಗಿ ದೈತ್ಯ ಪಾತ್ರಗಳಿಗೆ ಹೆಸರಾದವರು, ದುರ್ಯೋಧನ, ಕಂಸ, ರಾವಣ, ಜರಾಸಂಧ ಇವೇ ಮೊದಲಾದ ಪಾತ್ರಗಳನ್ನು ಯಶಸ್ವಿಯಾಗಿ ನಿಭಾಯಿಸಿ ಪೌರಾಣಿಕ ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿ ಹಾಸನ, ಮೈಸೂರು ಭಾಗದಲ್ಲಿ ಹೆಸರು ಮಾಡಿದ್ದಾರೆ. ನಾಟಕ ರಚನೆಕಾರರಾಗಿ ಛಲದೊಳ್ ದುರ್ಯೋಧನ, ಶಿವಶರಣ ರಾವಣ, ಸತ್ಯ ಹರಿಶ್ಚಂದ್ರ, ರಾವಣೇಶ್ವರ, ಮಹಾತ್ಮ ಕನಕದಾಸ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಸರ್ಕಾರಿ ಸೇವೆಯಲ್ಲಿ ಲೆಕ್ಕಾಧಿಕ್ಷಕರಾಗಿ ವಯೋನಿವೃತ್ತಿ ಹೊಂದಿದ್ದಾರೆ. ಇವರ ರಂಗ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಬರಹಗಾರರ ಸಂಘದ, ರಂಗ ಗಾಯನ ಘಟಕದ ಮೈಸೂರು ಜಿಲ್ಲಾ ಸಂಚಾಲಕರಾಗಿ ರಾಜ್ಯಾಧ್ಯಕ್ಷರು ಮಧುನಾಯ್ಕ ಲಂಬಾಣಿ ನೇಮಕ ಮಾಡಿದ್ದಾರೆ.. ಹಾಗೂ ಇವರ ಕಲಾಸೇವೆ ಗುರುತಿಸಿ ರಂಗರತ್ನ ಬಿರುದು ಪ್ರಶಸ್ತಿ ನೀಡಿ ಸಂಘದ ರಾಜ್ಯ ಗೌರವಾಧ್ಯಕ್ಷರು ಸಾಹಿತಿ ಗೊರೂರು ಅನಂತರಾಜು ಸನ್ಮಾನಿಸಿ ಗೌರವಿಸಿದರು. ಇದೇ ಸಂದರ್ಭ ಕರ್ನಾಟಕ ರಾಜ್ಯ ಬರಹಗಾರರ ಸಂಘದ ರಂಗ ಗಾಯನ ಹಾಸನ ಜಿಲ್ಲಾ ಸಂಚಾಲಕರಾಗಿ ನಿವೃತ್ತ ಪ್ರಾಂಶುಪಾಲರು ಹಾಗೂ ಹಿರಿಯ ರಂಗ ಕಲಾವಿದರು ಪ್ರೊ.ಎ.ಹೆಚ್. ಗಣೇಶ್ ಅವರನ್ನು ನೇಮಕ ಮಾಡಲಾಗಿದೆ. ಪ್ರೊ. ಎ.ಹೆಚ್. ಗಣೇಶ್ ಅವರು ಕದಂಬ ಸೈನ್ಯ ಹಾಸನ ಜಿಲ್ಲಾಧ್ಯಕ್ಷರು. ರಾಜ್ಯ ಘಟಕವು ಭುವನಗಿರಿಯಯಲ್ಲಿ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಎಸ್.ಎಸ್.ಪುಟ್ಟೇಗೌಡರ ಕಲಾ ಸೇವೆ ಗುರುತಿಸಿ ನೀಡಲಾಗಿದ್ದ ಕದಂಬ ಕಲಾಸೇವಾ ಪ್ರಶಸ್ತಿ ಪತ್ರ ನೀಡಿ ಪ್ರೊ.ಎ.ಹೆಚ್ ಗಣೇಶ್ ಗೌರವಿಸಿದರು. ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಬೆಂಗಳೂರು ರಾಜ್ಯಾಧ್ಯಕ್ಷರು ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್, ಗೋಡೆ ಬರಹಗಾರ ಕಲಾವಿದ ಯಾಕೂಬ್, ಹಾಗೂ ರಂಗನಟರು ಗುರುಮೂರ್ತಿ ಇದ್ದರು.



## ದ್ವಿದಳ ಧಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 2026–27ನೇ ಸಾಲಿನ ದ್ವಿದಳ ಧಾನ್ಯಗಳಲ್ಲಿ ಆತ್ಮನಿರ್ಭರತಾ ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೊಯ್ಲೋತ್ತರ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ. ಈ ಯೋಜನೆಯಡಿ ದ್ವಿದಳ ಧಾನ್ಯಗಳ ಸಂಸ್ಕರಣೆ ಹಾಗೂ ಪ್ಯಾಕೇಜಿಂಗ್ ಘಟಕಗಳ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ.

ರೈತರ ಆದಾಯ ಹೆಚ್ಚಿಸುವುದು ಹಾಗೂ ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 60:40 ಅನುಪಾತದ ಸಹಾಯಧನದಡಿ ಯೋಜನಾ ವೆಚ್ಚದ ಶೇ.33 ರಷ್ಟು ಸಹಾಯಧನವನ್ನು (ಗರಿಷ್ಟ ರೂ.25.00 ಲಕ್ಷಗಳ ಮಿತಿಯೊಂದಿಗೆ) ನೀಡಲಾಗುವುದು. ಘಟಕ ನಿರ್ಮಾಣದ ಭಾಗವಾಗಿ ಕಟ್ಟಡ, ಗೋದಾಮು/ ಸಂಗ್ರಹಣಾ ವ್ಯವಸ್ಥೆಗಳ ನಿರ್ಮಾಣಕ್ಕಾಗಿ ಅರ್ಹ ಸಹಾಯಧನ ಮೊತ್ತದ ಗರಿಷ್ಠ ಶೇ.30ರಷ್ಟು ಹಣ ಬಳಸಿಕೊಳ್ಳಲು ಅವಕಾಶವಿದೆ.

ಈ ಯೋಜನೆಯ ಸೌಲಭ್ಯವನ್ನು ರೈತ ಉತ್ಪಾದಕ ಸಂಸ್ಥೆಗಳು, ಕ್ಲಸ್ಟರ್‌ಮಟ್ಟದ ಒಕ್ಕೂಟಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿಎಸಿಎಸ್), ನೋಂದಾಯಿತ ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿಗಳು (ಯೋಜನಾ ವೆಚ್ಚದ ಶೇ.15ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮರ್ಥ್ಯ ಹೊಂದಿರುವುದು) ಪಡೆಯಲು ಅರ್ಹರು. ಆಸಕ್ತರು ತಮ್ಮ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ 2026ರ ಜೂನ್ 12 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ ಕೃಷಿ ಅಧಿಕಾರಿ/ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## "ಅದ್ಭುತ ಸಾಧಕ: ಕ್ಲಿಫ್ ಯಂಗ್"



ಡಾ.ಸುಧಾಕರ.ಜಿ.ಲಕ್ಕವಳ್ಳಿ


ಸ್ಫೂರ್ತಿ ಸುಧೆ - 21

ಸಾಧನೆಗೆ ವಯಸ್ಸು ಅಥವಾ ಆಧುನಿಕ ಸೌಲಭ್ಯಗಳು ಅಡ್ಡಿಯಲ್ಲ ಎಂಬುದಕ್ಕೆ ಆಸ್ಟ್ರೇಲಿಯಾದ ರೈತ ಕ್ಲಿಫ್ ಯಂಗ್ ಅವರ ಬದುಕೇ ಸಾಕ್ಷಿ. 61ನೇ ವಯಸ್ಸಿನಲ್ಲಿ ಅವರು ಮಾಡಿದ ಸಾಹಸ ಇಂದಿನ ಯುವಪೀಳಿಗೆಗೆ ದೊಡ್ಡ ಸ್ಫೂರ್ತಿ.

1983ರಲ್ಲಿ ಸಿಡ್ನಿಯಿಂದ ಮೆಲ್ಬೋರ್ನ್‌ವರೆಗೆ ನಡೆದ 875 ಕಿ.ಮೀ.ಗಳ ಸುದೀರ್ಘ ಅಲ್ಟ್ರಾ ಮ್ಯಾರಥಾನ್' ಸ್ಪರ್ಧೆಗೆ ಕ್ಲಿಫ್ ಬಂದಾಗ ಎಲ್ಲರೂ ಅಚ್ಚರಿಪಟ್ಟರು. ಯುವ ಓಟಗಾರರು ಅತ್ಯಾಧುನಿಕ ಸ್ಪೋರ್ಟ್ಸ್ ಶೂ ಧರಿಸಿದ್ದರೆ,ಕ್ಲಿಫ್ ಅವರು ತೋಟದಲ್ಲಿ ಬಳಸುವ ಸಾಧಾರಣ ಬಟ್ಟೆ ಮತ್ತು ಗಮ್‌ಬೂಟ್ ಧರಿಸಿ ಬಂದಿದ್ದರು. 61 ವರ್ಷದ ಮುದುಕನಿಗೆ ಈ ಓಟ ಅಸಾಧ್ಯ ಎಂದು ಅನೇಕರು ಲೇವಡಿ ಮಾಡಿದ್ದರು.

ಇತರ ಸ್ಪರ್ಧಿಗಳು ದಿನಕ್ಕೆ 18 ಗಂಟೆ ಓಡಿ,ರಾತ್ರಿ 6 ಗಂಟೆ ವಿಶ್ರಾಂತಿ ಪಡೆಯುತ್ತಿದ್ದರು.ಆದರೆ ಕುರಿ ಕಾಯುವ ವೃತ್ತಿಯಲ್ಲಿದ್ದ ಕ್ಲಿಫ್ ಅವರಿಗೆ ಕುರಿಗಳ ಹಿಂದೆ ದಿನಗಟ್ಟಲೆ ಓಡಿ ಅಭ್ಯಾಸವಿತ್ತು.ಅವರು ನಿದ್ರೆ ಮಾಡದೆ ಸತತವಾಗಿ ಓಡುತ್ತಲೇ ಇದ್ದರು. ಇತರರು ನಿದ್ರಿಸುವ ವೇಳೆಯಲ್ಲಿ ಇವರು ಮೈಲುಗಳಷ್ಟು ದೂರ ಕ್ರಮಿಸಿ ಎಲ್ಲರಿಗಿಂತ ಮುಂದೆ ಸಾಗಿದರು.


ಅಂತಿಮವಾಗಿ,ತಮಗಿಂತ ಅರ್ಧ ವಯಸ್ಸಿನ ಪಳಗಿದ ಓಟಗಾರರನ್ನು ಹಿಂದಿಕ್ಕಿ ಕ್ಲಿಫ್ ಯಂಗ್




ಮೊದಲಿಗರಾಗಿ ಗುರಿ ತಲುಪಿದರು. ಅಷ್ಟೇ ಅಲ್ಲದೆ, ತಮಗೆ ಬಂದ ಬಹುಮಾನದ ಹಣವನ್ನು ತಮಗಾಗಿ ಬಳಸದೆ ಇತರ ಸ್ಪರ್ಧಿಗಳಿಗೆ ಹಂಚಿ ಮಾನವೀಯತೆ ಮೆರೆದರು.

ಇಂದಿನ ಯುವಕರು ಸೌಲಭ್ಯಗಳ ಕೊರತೆಯ ನೆಪ ಹೇಳುತ್ತಾರೆ.ಆದರೆ ಕ್ಲಿಫ್ ಯಂಗ್ ಅವರ ಕಥೆ ನಮಗೆ ಕಲಿಸುವುದು ಒಂದೇ ಛಲ ಮತ್ತು ಪರಿಶ್ರಮವಿದ್ದರೆ ಶೂಗಳಿಗಿಂತಲೂ ನಮ್ಮ ಪಾದಗಳಿಗೆ ಹೆಚ್ಚು ವೇಗವಿರುತ್ತದೆ.ಗುರಿ ತಲುಪುವವರೆಗೂ ವಿಶ್ರಮಿಸದಿರುವುದೇ ನಿಜವಾದ ಸಾಧನೆ.

# ಪುಸ್ತಕಕ್ಕಿಂತ ಹೆಚ್ಚು ಜೀವನ ಪಾಠ ಕಲಿಸುವ ಮೂರು ಮಹಾ ಶಕ್ತಿಗಳು



ಒಂದು ಮಾತು ಬಹಳ ಸರಳವಾಗಿದೆ, ಆದರೆ ಅದರಲ್ಲಿ ಅಡಗಿರುವ ಅರ್ಥ ಗಂಭೀರವಾಗಿದೆ "Situation, Time & People, these three things teach better lessons than a Book." ಪರಿಸ್ಥಿತಿ, ಕಾಲ ಮತ್ತು ಮನುಷ್ಯ ಈ ಮೂರು ಜೀವನದ ನಿಜವಾದ ಗುರುಗಳು. ಪುಸ್ತಕ ಜ್ಞಾನ ನೀಡುತ್ತದೆ, ಆದರೆ ಅನುಭವ ಪ್ರಜ್ಞೆ ನೀಡುತ್ತದೆ. ಈ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳದವ ಎಷ್ಟೇ ಓದಿದರೂ ನಿಜವಾದ ವಿದ್ಯೆ ಪಡೆಯಲಾರ.

ಭಾರತೀಯ ತತ್ತ್ವಚಿಂತನೆಯು ಶತಮಾನಗಳ ಹಿಂದೆಯೇ ಈ ಸತ್ಯವನ್ನು ಗುರುತಿಸಿತ್ತು. ಉಪನಿಷತ್ತಿನಲ್ಲಿ ಹೇಳಿರುವಂತೆ "ನಾಯಮಾತ್ಮಾ ಪ್ರವಚನೇನ ಲಭ್ಯಃ" ಅಂದರೆ ಆತ್ಮಜ್ಞಾನ ಕೇವಲ ಪ್ರವಚನದಿಂದ, ಶಾಸ್ತ್ರ ಓದಿನಿಂದ ದೊರೆಯುವುದಿಲ್ಲ. ಅದು ಬೇಕಾದರೆ ಜೀವಿಸಬೇಕು, ಅನುಭವಿಸಬೇಕು, ಅರ್ಥ ಮಾಡಿಕೊಳ್ಳಬೇಕು. ಇದೇ ಮಾತನ್ನು ಈ ಮೂರು ಮಹಾ ಶಕ್ತಿಗಳು ಪರಿಸ್ಥಿತಿ, ಕಾಲ, ಮತ್ತು ಮನುಷ್ಯ ನಮಗೆ ತೋರಿಸಿಕೊಡುತ್ತವೆ.

**ಪರಿಸ್ಥಿತಿ: ಕಠಿಣತೆಯ ಬೋಧನೆ :** ಮನುಷ್ಯನ ನಿಜವಾದ ಪ್ರಕೃತಿ ಸುಖದಲ್ಲಿ ಅಲ್ಲ, ಕಷ್ಟದಲ್ಲಿ ತಿಳಿಯುತ್ತದೆ. ಇದು ಕ್ರೂರ ಸತ್ಯವಿರಬಹುದು, ಆದರೆ ಇದು ಶಾಶ್ವತ ಸತ್ಯ. ಒಂದು ನದಿ ಸಮತಟ್ಟಿನಲ್ಲಿ ಮೆಲ್ಲಗೆ ಹರಿಯುತ್ತದೆ; ಆದರೆ ಬಂಡೆಗಳ ನಡುವೆ ಸಿಲುಕಿದಾಗ ಅದರ ನಿಜವಾದ ಶಕ್ತಿ ಪ್ರಕಟಗೊಳ್ಳುತ್ತದೆ. ಹಾಗೆಯೇ ಮನುಷ್ಯನ ಆಳ, ಸಹನೆ, ಮತ್ತು ಬುದ್ಧಿಶಕ್ತಿ ಪ್ರತಿಕೂಲ ಪರಿಸ್ಥಿತಿಯಲ್ಲಿ ಮಾತ್ರ ಅರಳುತ್ತದೆ.

ಬಾಳ್ವೆ ನಮ್ಮನ್ನು ಸುಮ್ಮನೆ ಕೂರಿಸುವುದಿಲ್ಲ. ಅದು ನಿರಂತರ ಕಾರ್ಯಶೀಲತೆಯನ್ನು ಬಯಸುತ್ತದೆ. ಪ್ರತಿ ಪರಿಸ್ಥಿತಿಯೂ ಒಂದು ಪಾಠ. ಪ್ರತಿ ಕಷ್ಟವೂ ಒಂದು ಶಿಕ್ಷಕ.

ಕೌರವರು ಮತ್ತು ಪಾಂಡವರ ವನವಾಸ ಇದಕ್ಕೊಂದು ಶ್ರೇಷ್ಠ ಉದಾಹರಣೆ. ಹದಿಮೂರು ವರ್ಷಗಳ ಅರಣ್ಯವಾಸ ಪಾಂಡವರಿಗೆ ಯಾವ ಗ್ರಂಥವೂ ಕಲಿಸದ ಪಾಠ ಕಲಿಸಿತು ಸಹನೆ, ವಿನಯ, ಲೋಕಜ್ಞಾನ, ಮತ್ತು ಮಾನವ ಸ್ವಭಾವದ ಆಳ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಉಪದೇಶ ನೀಡಿದ್ದು ಮಹಾ ಸಂಕಟದ ಕ್ಷಣದಲ್ಲಿ ಯುದ್ಧಭೂಮಿಯ ಮಧ್ಯೆ. ಸ್ವಜನರನ್ನು ಕಾಣುತ್ತ ಅರ್ಜುನ ವಿಹ್ವಲನಾದಾಗ, ಮೋಹಗ್ರಸ್ತನಾದಾಗ, ಅಲ್ಲಿ ಗೀತೆಯ ಜ್ಞಾನ ಅವತರಿಸಿತು. ಪ್ರತಿಕೂಲ ಪರಿಸ್ಥಿತಿ ಮಾತ್ರ ನಿಜವಾದ ಜ್ಞಾನಕ್ಕೆ ಬಾಗಿಲು ತೆರೆಯಬಲ್ಲದು.

ಒಬ್ಬ ವ್ಯಕ್ತಿ ಆರ್ಥಿಕ ಸಂಕಷ್ಟ ಅನುಭವಿಸಿ ಬಂದಾಗ, ಅವನಿಗೆ ಹಣದ ಮೌಲ್ಯ ತಿಳಿದಿರುತ್ತದೆ. ಅನಾರೋಗ್ಯ ಅನುಭವಿಸಿ ಬಂದಾಗ, ಆರೋಗ್ಯದ ಮೌಲ್ಯ ತಿಳಿಯುತ್ತದೆ. ಏಕಾಂತ ಅನುಭವಿಸಿ ಬಂದಾಗ, ಸಂಬಂಧಗಳ ಮೌಲ್ಯ ಅರಿವಾಗುತ್ತದೆ. ಈ ಮೌಲ್ಯಗಳನ್ನು ಯಾವ ಪಠ್ಯಪುಸ್ತಕವೂ ಕಲಿಸಲಾರದು. ಪರಿಸ್ಥಿತಿ ಮಾತ್ರ ಕಲಿಸಬಲ್ಲದು.

**ಕಾಲ: ಎಲ್ಲ ಗುರುಗಳ ಗುರು :** ಭಾರತೀಯ ತತ್ತ್ವಶಾಸ್ತ್ರದಲ್ಲಿ ಕಾಲಕ್ಕೆ ಅದ್ಭುತ ಸ್ಥಾನವಿದೆ. "ಕಾಲಃ ಕಲಯತೇ ಸರ್ವಾನ್" ಕಾಲ ಎಲ್ಲವನ್ನೂ ಗ್ರಸಿಕೊಳ್ಳುತ್ತದೆ. ಭಗವದ್ಗೀತೆಯ ಹನ್ನೊಂದನೇ ಅಧ್ಯಾಯದಲ್ಲಿ ಶ್ರೀಕೃಷ್ಣ ತನ್ನ ವಿಶ್ವರೂಪ ತೋರಿಸಿ ಹೇಳುತ್ತಾನೆ "ಕಾಲೋऽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ" ನಾನು ಕಾಲ, ಲೋಕಗಳನ್ನು ನಾಶ ಮಾಡುವ ಮಹಾಕಾಲ. ಇಲ್ಲಿ ಕಾಲ ಕೇವಲ ಸಮಯವಲ್ಲ ಅದು ಒಂದು ಮಹಾಶಕ್ತಿ, ಮಹಾ ಗುರು.

ಕಾಲ ಕಲಿಸುವ ಪಾಠ ತಕ್ಷಣ ಅರಿವಾಗುವುದಿಲ್ಲ. ಅದು ಮೆಲ್ಲಗೆ ಬರುತ್ತದೆ, ಆಳವಾಗಿ ಇಳಿಯುತ್ತದೆ. ಹತ್ತು ವರ್ಷದ ಹಿಂದೆ ನಮ್ಮನ್ನು ತೀವ್ರವಾಗಿ ನೋಯಿಸಿದ ಘಟನೆ, ಇಂದು ಅದೇ ಘಟನೆ ಒಂದು ಮೈಲಿಗಲ್ಲಿನಂತೆ ಕಾಣಿಸುತ್ತದೆ. ಆ ಬದಲಾವಣೆ ಯಾರೂ ತಂದುಕೊಟ್ಟಿಲ್ಲ. ಕಾಲ ತಂದುಕೊಟ್ಟಿದೆ. ಕಾಲ ಗಾಯ ಮಾಯಿಸುತ್ತದೆ, ದೃಷ್ಟಿ ಬದಲಿಸುತ್ತದೆ, ಆಗ ಸ್ವಲ್ಪ ಸ್ವಲ್ಪವಾಗಿ ಪ್ರಜ್ಞೆ ಬೆಳೆಯುತ್ತದೆ.

ಕಾಲ ಚಕ್ರ ನಿಲ್ಲದು. ಅದರ ಗಾಲಿ ಸದಾ ಉರುಳುತ್ತಲೇ ಇರುತ್ತದೆ. ರಾಜ ಮಹಾರಾಜರೂ, ಪಂಡಿತರೂ, ಸಾಮಾನ್ಯ ಮಾನವನೂ ಎಲ್ಲರೂ ಕಾಲದ ಮುಂದೆ ಶಿಷ್ಯರೇ. ಕಾಲ ಏನನ್ನೂ ಮರೆಯುವುದಿಲ್ಲ, ಏನನ್ನೂ ಕ್ಷಮಿಸುವುದಿಲ್ಲ, ಆದರೆ ಎಲ್ಲವನ್ನೂ ಅರ್ಥ ಮಾಡಿಸುತ್ತದೆ.

ಉಪನಿಷತ್ತು ಹೇಳುತ್ತದೆ "ಸರ್ವಂ ಖಲ್ವಿದಂ ಬ್ರಹ್ಮ" ಇಲ್ಲಿ ಕಾಲವೂ ಬ್ರಹ್ಮದ ಒಂದು ಅಭಿವ್ಯಕ್ತಿ. ಕಾಲದ ಚಲನೆಯಲ್ಲಿ ಒಂದು ಅದ್ಭುತ ನ್ಯಾಯವಿದೆ. ಏನು ಬಿತ್ತಿದ್ದೆವೋ, ಅದನ್ನೇ ಕೊಡುತ್ತದೆ ತಡವಾಗಿಯಾದರೂ, ನಿಖರವಾಗಿ. ತಾಳ್ಮೆಯಿಂದ ಕಾಯುವವನಿಗೆ ಕಾಲ ಶ್ರೇಷ್ಠ ಗುರು; ತರಾತುರಿಯಲ್ಲಿ ಓಡುವವನಿಗೆ ಶಿಕ್ಷಕ. ಆದರೆ ಎರಡೂ ದಾರಿಯಲ್ಲಿ ಕಲಿಕೆ ಇದ್ದೇ ಇದೆ.

**ಮನುಷ್ಯ:** ಸಂಬಂಧಗಳ ಪಾಠಶಾಲೆ: ಮನುಷ್ಯ ಒಂದು ಸಾಮಾಜಿಕ ಜೀವಿ ಇದು ಕೇವಲ ವ್ಯಾಖ್ಯಾನವಲ್ಲ, ಇದು ಬಾಳಿನ ಮೂಲ ಅಧ್ಯಾಯ. ನಮ್ಮ ಜೀವನದ ಅತ್ಯಂತ ಆಳವಾದ ಪಾಠಗಳು ಯಾವ ಪುಸ್ತಕದಿಂದ ಬರುವುದಿಲ್ಲ. ಅವು ಬರುವುದು ಒಬ್ಬ ಅಪ್ಪನ ಮೌನದಿಂದ, ಒಬ್ಬ ಗೆಳೆಯನ ವಿಶ್ವಾಸಘಾತದಿಂದ, ಒಬ್ಬ ಅಪರಿಚಿತನ ಔದಾರ್ಯದಿಂದ, ಒಬ್ಬ ಮುದುಕಿಯ ಒಂದೇ ಒಂದು ಮಾತಿನಿಂದ.

ಕಠೋಪನಿಷತ್ತಿನಲ್ಲಿ ನಚಿಕೇತ ಮತ್ತು ಯಮನ ಸಂವಾದ ಬರುತ್ತದೆ. ಇಲ್ಲಿ ಯಮ ಕೇವಲ ಮೃತ್ಯುದೇವತೆಯಲ್ಲ ಅವನು ಒಬ್ಬ ಗುರು. ನಚಿಕೇತನ ಜ್ಞಾನ ಪಿಪಾಸೆ ಯಮನ ಮನ ಗೆಲ್ಲುತ್ತದೆ. ಆ ಸಂಬಂಧ, ಆ ಸಂವಾದ, ಆ ಮಾನವ ಸ್ಪರ್ಶ ಇದು ಜ್ಞಾನದ ನಿಜವಾದ ಮೂಲ. ಮನುಷ್ಯ ಮನುಷ್ಯನಿಗೆ ಗುರು ಇದು ಭಾರತೀಯ ಗುರುಶಿಷ್ಯ ಪರಂಪರೆಯ ಮೂಲ ಮಂತ್ರ.

ಒಬ್ಬ ವ್ಯಕ್ತಿ ನಮ್ಮನ್ನು ಮೋಸ ಮಾಡಿದಾಗ, ಆ ಕ್ಷಣ ನಾವು ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬ ವಿವೇಚನೆ ಹುಟ್ಟುತ್ತದೆ. ಒಬ್ಬ ವ್ಯಕ್ತಿ ಅಗಾಧ ಪ್ರೀತಿ ತೋರಿಸಿದಾಗ, ನಮ್ಮ ಹೃದಯ ವಿಸ್ತಾರವಾಗುತ್ತದೆ. ಒಬ್ಬ ನಾಯಕ ಅಧಿಕಾರ ಬಳಸಿ ಅನ್ಯಾಯ ಮಾಡಿದಾಗ, ನ್ಯಾಯ–ಅನ್ಯಾಯಗಳ ಅರಿವು ತೀಕ್ಷ್ಣವಾಗುತ್ತದೆ. ಹೀಗೆ ಪ್ರತಿ ಮನುಷ್ಯ ನಮ್ಮ ಒಳಗಿನ ಯಾವುದೋ ಪದರವನ್ನು ಬಿಚ್ಚಿಡುತ್ತಾನೆ.

ಡಿ.ವಿ.ಜಿ. ಕಗ್ಗದಲ್ಲಿ ಸಂಬಂಧಗಳ ಬಗ್ಗೆ ಅದ್ಭುತ ಒಳನೋಟ ಕೊಡುತ್ತಾರೆ ಈ ಜಗತ್ತಿನ ಎಲ್ಲ ಸಂಬಂಧಗಳೂ ಒಂದು ಮಾಯಾಜಾಲ, ಆದರೆ ಆ ಜಾಲದ ಮೂಲಕ ಮಾತ್ರ ಸಾರ ಸಿಗುತ್ತದೆ. ಸಂಬಂಧಗಳ ಮೂಲಕ ಬರುವ ಮೋಹ, ನೋವು, ಆನಂದ ಇವೆಲ್ಲ ಆತ್ಮದ ಪರಿಶುದ್ಧತೆಗೆ ಕಸುವು ಕೊಡುತ್ತವೆ.

**ಮೂರರ ಸಮ್ಮಿಲನ: ಜ್ಞಾನದ ತ್ರಿವೇಣಿ :** ಈ ಮೂರು ಪರಿಸ್ಥಿತಿ, ಕಾಲ, ಮತ್ತು ಮನುಷ್ಯ ಪ್ರತ್ಯೇಕವಾಗಿ ಅಲ್ಲ, ಒಟ್ಟಿಗೇ ಕೆಲಸ ಮಾಡುತ್ತವೆ. ಒಂದು ಕಷ್ಟದ ಪರಿಸ್ಥಿತಿ ಬರುತ್ತದೆ. ಅದರ ನಡುವೆ ಒಬ್ಬ ಮನುಷ್ಯ ಕೈ ಹಿಡಿಯುತ್ತಾನೆ ಅಥವಾ ಕೈ ಬಿಡುತ್ತಾನೆ. ಕಾಲ ಉರುಳಿ ಹೋಗುತ್ತದೆ. ಆ ಮೂರರ ಸಂಗಮದಲ್ಲಿ ನಾವು ಬದಲಾಗಿರುತ್ತೇವೆ. ಆ ಬದಲಾವಣೆ, ಆ ಮಾಗುವಿಕೆ ಅದೇ ನಿಜವಾದ ಶಿಕ್ಷಣ.

ಭಗವದ್ಗೀತೆಯ ನಾಲ್ಕನೇ ಅಧ್ಯಾಯದಲ್ಲಿ ಶ್ರೀಕೃಷ್ಣ ಹೇಳುತ್ತಾನೆ "ತದ್ ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ" ಜ್ಞಾನ ಪಡೆಯಬೇಕಾದರೆ ನಮ್ರತೆ, ಪ್ರಶ್ನಿಸುವ ಮನಸ್ಸು, ಮತ್ತು ಸೇವಾ ಭಾವ ಬೇಕು. ಆ ಮೂರು ಗುಣಗಳು ಬರುವುದು ಪುಸ್ತಕ ಓದಿದ ಮಾತ್ರಕ್ಕೆ ಅಲ್ಲ. ಬದುಕಿನ ಸಂದರ್ಭಗಳಲ್ಲಿ, ಕಾಲದ ಪರೀಕ್ಷೆಯಲ್ಲಿ, ಮನುಷ್ಯರ ಸ್ಪರ್ಶದಲ್ಲಿ ಮಾತ್ರ ಅವು ಪಕ್ವವಾಗುತ್ತವೆ.

ಅನೇಕ ಬಾರಿ ನಾವು ಅನುಭವದ ಮೌಲ್ಯ ಅರ್ಥ ಮಾಡಿಕೊಳ್ಳುವುದಿಲ್ಲ. ನಮ್ಮ ತಾತ ಹೇಳಿದ ಮಾತು ಆ ಕ್ಷಣ ಅರ್ಥವಾಗುವುದಿಲ್ಲ. ವರ್ಷಗಳ ನಂತರ, ಒಂದು ಪ್ರಸಂಗದ ನಡುವೆ, ಆ ಮಾತು ಇದ್ದಕ್ಕಿದ್ದಂತೆ ಅರ್ಥ ಬೆಳಗಿಕೊಳ್ಳುತ್ತದೆ. ಅದು ಯಾಕೆ ಕಾರಣ, ಆ ನಡುವೆ ಒಂದು ಪರಿಸ್ಥಿತಿ, ಒಂದು ಸಮಯ, ಒಬ್ಬ ಮನುಷ್ಯ ಮೂರೂ ಒಟ್ಟಿಗೆ ಸೇರಿ ಆ ಮಾತನ್ನು ಅರ್ಥ ಮಾಡಿಸಿದ್ದಾರೆ.

**ಪುಸ್ತಕ ಮತ್ತು ಅನುಭವ:** ಎರಡೂ ಬೇಕು :

ಇಲ್ಲಿ ಒಂದು ಮಾತು ಸ್ಪಷ್ಟ ಪಡಿಸಬೇಕು ಪುಸ್ತಕ ನಿರರ್ಥಕ ಎಂದಲ್ಲ. ಪುಸ್ತಕ ಒಂದು ದಾರಿ ತೋರಿಸುತ್ತದೆ, ಆದರೆ ನಡೆಯಬೇಕಾದ್ದು ನಾವೇ. ಭಾರತೀಯ ಜ್ಞಾನ ಪರಂಪರೆಯಲ್ಲಿ ಶ್ರವಣ, ಮನನ, ಮತ್ತು ನಿಧಿಧ್ಯಾಸನ ಎಂಬ ಮೂರು ಹಂತಗಳಿವೆ. ಶ್ರವಣ ಕಲಿಯುವುದು (ಪುಸ್ತಕ, ಗುರು). ಮನನ ಚಿಂತಿಸುವುದು. ನಿಧಿಧ್ಯಾಸನ ಆಂತರ್ಯದಲ್ಲಿ ಇಳಿಸಿಕೊಳ್ಳುವುದು, ಅನುಭವದ ಮೂಲಕ ಜೀರ್ಣಿಸಿಕೊಳ್ಳುವುದು. ಮೂರನೇ ಹಂತ ಪೂರ್ಣವಾಗಲು ಪರಿಸ್ಥಿತಿ, ಕಾಲ ಮತ್ತು ಮನುಷ್ಯ ಬೇಕೇ ಬೇಕು.

ಒಬ್ಬ ವೈದ್ಯ ಐದು ವರ್ಷ ಓದುತ್ತಾನೆ. ಆದರೆ ಮೊದಲ ರೋಗಿ ನೋಡಿದಾಗ ಮಾತ್ರ ನಿಜವಾದ ವೈದ್ಯ ಆಗುತ್ತಾನೆ. ಒಬ್ಬ ವಕೀಲ ಶಾಸ್ತ್ರ ಓದಿ ಮುಗಿಸುತ್ತಾನೆ. ಆದರೆ ಮೊದಲ ಕೋರ್ಟ್ ಹಾಜರಾತಿ, ಮೊದಲ ಗ್ರಾಹಕನ ಸಂಕಟ ಅದು ಅವನನ್ನು ನಿಜವಾದ ವಕೀಲ ಮಾಡುತ್ತದೆ. ಅನುಭವ ಪ್ರಮಾಣಪತ್ರ ನೀಡುವ ಸ್ಥಳಗಳಿಗೆ ಒಮ್ಮೆಯೂ ಹೋಗದ ಗುರು.

ಜೀವನ ಒಂದು ಪಾಠಶಾಲೆ ಇದು ಎಲ್ಲರಿಗೂ ಗೊತ್ತಿರುವ ಮಾತು. ಆದರೆ ಆ ಪಾಠಶಾಲೆಯ ಮೂರು ಅತ್ಯಂತ ಪ್ರಭಾವಶಾಲಿ ಶಿಕ್ಷಕರ ಹೆಸರು ಪರಿಸ್ಥಿತಿ, ಕಾಲ, ಮತ್ತು ಮನುಷ್ಯ. ಈ ಮೂವರ ಮುಂದೆ ತಲೆ ಬಾಗಿ, ಅವರು ಕಲಿಸುವ ಪಾಠ ನಿಷ್ಠೆಯಿಂದ ಕಲಿಯುವವ ಅವನು ನಿಜವಾದ ಶಿಕ್ಷಿತ. ಕಗ್ಗದ ಮಾತಿನಲ್ಲಿ ಹೇಳಬೇಕಾದರೆ ಮೋಕ್ಷ ನಿನ್ನ ಒಳಗಡೆ ಇದೆ; ಅದನ್ನು ತೋರಿಸುವ ಗುರು ನಿನ್ನ ಸುತ್ತಲಿನ ಜಗತ್ತಿನಲ್ಲಿ ಇದ್ದಾನೆ. ಕಣ್ಣು ತೆರೆದು ಕಾಣು ಪ್ರತಿ ಘಳಿಗೆ, ಪ್ರತಿ ಪ್ರಸಂಗ, ಪ್ರತಿ ಮನುಷ್ಯ ನಿನ್ನ ಗುರು.

ಈ ಸತ್ಯ ಅರ್ಥ ಮಾಡಿಕೊಂಡವ ಜ್ಞಾನಿ; ಈ ಸತ್ಯ ಜೀವಿಸಿದವ ಮುಕ್ತ.




| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

## ಪದ ಬಂಧ

ಜ್ಯೋತಿ ರಾಜೇಶ್







### ಎಡದಿಂದ ಬಲಕ್ಕೆ

2. ವ್ಯಕ್ತಿ ಅಥವಾ ಸ್ಥಳದ ಸಂಪರ್ಕ ವಿವರ....(3)
5. ವಸ್ತುವನ್ನು 'ಗೋಲಾಕಾರವಾಗಿ ಸುತ್ತುವರಿದ" ಎಂಬ ಅರ್ಥ ಕೊಡುವ ಪದವಿದು.....(4)
7. ಆತ್ಮವಿಶ್ವಾಸದಲ್ಲಡಗಿದ ಹಬೆ....(2)
8. ಹಿಂದೂ ಪುರಾಣದ ಪ್ರಕಾರ ಬ್ರಹ್ಮನಿಗೆ ಹೀಗೆ ಹೇಳಿ.....(4)
9. ನೆನಪಲ್ಲಡಗಿದ ಸಬೂಬು ...(2)
11. ನವಿರಾದ/ಇಂಪಾದ ಶಬ್ದವನ್ನು ಹೀಗೆ ಹೇಳಿ....(3)
12. ಸಮರ್ಥ ಎಂಬುದನ್ನು ಎರೆಡಕ್ಷರದಲ್ಲಿ ಹೇಳಿ....(2)
14. ಯಾವುದೇ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಅಭಿಪ್ರಾಯ ಹೇಳುವವನಿವ.....(4)
17. ದುಷ್ಟ ಅಥವಾ ಕಿಡಿಗೇಡಿ.....(2)
18. ದೇವರಿಗೆ ಬೆಳಗುವ ಆರತಿ/ದೀಪ.....(4)
19. ಸೆರೆಯಲ್ಲಿ ನೀಡಿದ ಆಧಾರ....(3)


### ಮೇಲಿನಿಂದ ಕೆಳಕ್ಕೆ.....

1. ಕನಸಲ್ಲಾದ ನಡುಕವೆ ಇದು....(3)
2. ವಿಪತ್ತಿಗಾದ ಹಣವಿದು....(2)
3. ಒಟ್ಟುಗೂಡಿದ ಅಥವ ಪೂರ್ಣ ಎಂಬರ್ಥದ ಪದ.....(3)
4. ಬೆಳಕನ್ನು ಎರೆಡಕ್ಷರದಲ್ಲಿ ಹೀಗೆ ಹೇಳಿ.....(2)
6. ರಾಶಿಯೊಂದರ ಹೆಸರು ಕುಟುಕುತ್ತಿದೆಯೆ.....(3)
7. ತೀವ್ರ ಸಂಕಟ ಅಥವಾ ನೋವಿನಿಂದ ಬಂದ ಕೂಗು.....(4)
8. ಏನನ್ನಾದರೂ ವಿಶಿಷ್ಟವಾಗಿ, ಕಲ್ಪನಾ ಶೀಲವಾಗಿ ರೂಪಿಸುವ ಸ್ವಭಾವವಿದು.....(5)
10. ಪುಸ್ತಕದ ಆರಂಭದಲ್ಲಿರುವ, ವಿಷಯಗಳನ್ನು ವ್ಯವಸ್ಥಿತ ಕ್ರಮದಲ್ಲಿ ಜೋಡಿಸಿರುವ ಪಟ್ಟಿ.....(4)
13. ಹಿಂದೂ ತತ್ವ ಶಾಸ್ತ್ರದ ಪ್ರಕಾರ, ಪ್ರಕೃತಿಯ ಮೂರು ಮೂಲಭೂತ ಗುಣಗಳಲ್ಲೊಂದು..... ತಲೆ ಕೆಳಗಾಗಿದೆ.....(3)
15. ಅನುಕರಣೀಯವಾದ ಧ್ಯೇಯವಿದು.... ಶೀರ್ಷಾಸನ ಹಾಕಿದೆ.....(3)
16. ಈ ಬೇಸಗೆಯಲ್ಲಿ ಇದರ ಸೇವನೆ ದೇಹಕ್ಕೆ ಹಿತಕರ....(3)
17. ಇದು ಉತ್ತರ ಕರ್ನಾಟಕದವರ 'ಕೋಣೆ'.....(2)
18. ಇವಳಿಗೆ ನಿದಿರೆಯಲ್ಲೂ ಸೀರೆ ಇಷ್ಟವಂತೆ.....(2)

# ಅಸಹಾಯಕತೆಗೆ ಸ್ಪಂದಿಸುವ ಕನ್ನಡಿಗರ ಸೌಜನ್ಯಕ್ಕೆ ಸಾಟಿಯುಂಟೇ......



ಹಿರಿಯೂರು ಪ್ರಕಾಶ್.



ಮೊನ್ನೆ ಭಾನುವಾರ ಬೆಳಿಗ್ಗೆ ಬೆಂಗಳೂರಿನ ನಮ್ಮಮೆಟ್ರೋ ರೈಲಿನಲ್ಲಿ ಯಶವಂತಪುರದಿಂದ ಜಯನಗರದೆಡೆಗೆ ಪ್ರಯಾಣ ಮಾಡುತ್ತಿದ್ದಾಗ ನಾ ಗಮನಿಸಿದ ಒಂದು ಚಿಕ್ಕ ಸನ್ನಿವೇಶ ಹೀಗಿತ್ತು ನೋಡಿ.

ಬೆಂಗಳೂರಿನಲ್ಲಿ ಎಲ್ಲೋ ಕೆಲ ಸುಡುಮಧ್ಯಾಹ್ನದ ಸಮಯ ಬಿಟ್ಟರೆ ಮಿಕ್ಕೆಲ್ಲಾ ಸಮಯದಲ್ಲೂ ಮೆಟ್ರೋಗಳಲ್ಲಿನ ಜನಸಂದಣಿ ವರ್ಣನೆಗೆ ನಿಲುಕದು. ಕಷ್ಟಪಟ್ಟು ನಿಂತು ನೇತಾಡಿಕೊಂಡು ಪಯಣಿಸಲೂ ಒದ್ದಾಡಬೇಕಾದ ಸ್ಥಿತಿ ಇರುವಾಗ ಇನ್ನು ಮೆಟ್ರೋರೈಲಿನಲ್ಲಿ ಕುಳಿತು ಪಯಣಿಸುವುದಕ್ಕೆ ಅದೃಷ್ಟ ಇರಬೇಕು. ನಾನಿದ್ದ ಭೋಗಿಯಲ್ಲಿ ಎಂದಿನಂತೆ ನಾನು ನಿಂತು ಪಯಣಿಸುತ್ತಿದ್ದ ಭೋಗಿಯಲ್ಲಿನ ಜಾಗದ ಎದುರು ಬದುರು ಸೀಟುಗಳಲ್ಲಿ ಎರಡು ಜೋಡಿಗಳು ಆಸೀನರಾಗಿ ಸಂಭಾಷಣೆಯಲ್ಲಿ ತೊಡಗಿದ್ದರು.

ಜೀನ್ಸು ಟೀ ಷರ್ಟು ತೊಟ್ಟ ಒಂದು ಜೋಡಿ ಸುಮಾರು ಮುವ್ವತ್ತರಿಂದ ಮುವ್ವತ್ತೈದರ ಆಸುಪಾಸಿನಲ್ಲಿದ್ದು ಹಿಂದಿಯಲ್ಲಿ , ಅವರ ಸಹಜವಾದ ಜೋರಾದ ಧ್ವನಿಯಲ್ಲಿ ಖುಷಿಯಿಂದ ಮಾತನಾಡುತ್ತಾ ಕೂತಿದ್ದರು. ಅವರನ್ನು ಕಂಡಾಗ ಉತ್ತರಭಾರತದ ರಾಜ್ಯದವರೆಂದು ಸುಲಭಕ್ಕೆ ಗುರುತಿಸಬಹುದಿತ್ತು.

ಅವರ ಎದುರಿಗೆ ಮತ್ತೊಂದು ಹಿರಿಯ ಜೋಡಿ ಬಹುಶಃ 55 ರಿಂದ 60 ರ ಪ್ರಾಯದವರಾಗಿದ್ದು ಪರಿಶುದ್ಧವಾದ ಕನ್ನಡದಲ್ಲಿ ಸೌಮ್ಯವಾಗಿ ಮಾತನಾಡುತ್ತಿದ್ದರು. ಅವರನ್ನು ಕರ್ನಾಟಕದವರೆಂದು ಹೇಳುವ ಅಗತ್ಯವಿಲ್ಲವಲ್ಲವೇ..!

ರೈಲು ರಾಜಾಜಿನಗರ ನಿಲ್ದಾಣದಕ್ಕೆ ಬಂದಾಗ ಅಲ್ಲಿ ನಾಲ್ಕು ಜನರ ಒಂದು ಕುಟುಂಬ ನಾವಿದ್ದ ಭೋಗಿಯನ್ನು ಏರಿದರು. ಅವರೆಲ್ಲರೂ ಅನ್ಯರಾಜ್ಯದ ಮಹಿಳೆಯರೇ ಆಗಿದ್ದು ಒಬ್ಬ ಮಹಿಳೆ ತನ್ನ ಚಿಕ್ಕ ಮಗುವನ್ನು ಎತ್ತಿಕೊಂಡೇ ನಿಂತಿದ್ದರು. ಅವರೆಲ್ಲಾ ಸರಿಯಾಗಿ ಈ ಉತ್ತರದ ಹಿಂದಿ ಮಾತನಾಡುವ ಜೋಡಿಯೆದುರು ನಿಂತಿದ್ದರು. ಆಕೆ ಮಗುವನ್ನೆತ್ತಿಕೊಂಡು ನಿಂತಿರುವ ಪಡಿಪಾಟಲನ್ನು ನೋಡಿಯೂ ನೋಡದಂತೆ ಈ ಜೋಡಿ ತಮ್ಮ ಸಂಭಾಷಣೆಯಲ್ಲಿ ಮುಳುಗಿದ್ದರು.

ಆಕೆಯ ಕಷ್ಟಕ್ಕೆ ಸ್ಪಂದಿಸುವ ಲಕ್ಷಣ ಇವರಲ್ಲಿ ಕಂಡುಬರದಾದಾಗ ಇನ್ನೇನು ಮಗು ಎತ್ತಿಕೊಂಡಿರುವ ಆ ಮಹಿಳೆಗೆ ಜಾಗ ಕೊಡಿ ಎಂದು ನಾನು ಹೇಳಬೇಕೆಂದುಕೊಳ್ಳುವಷ್ಟರಲ್ಲಿಯೇ , ಆಕೆಯನ್ನು ನೋಡಿದ ಎದುರು ಸೀಟಿನಲ್ಲಿ ಕುಳಿತಿದ್ದ ನಮ್ಮ ಕನ್ನಡದ ಆ ಹಿರಿಯ ಜೋಡಿಯ ವ್ಯಕ್ತಿ ಮೇಲೆದ್ದು ಮಗುವನ್ನೆತ್ತಿಕೊಂಡಿದ್ದ ಆ ಮಹಿಳೆಗೆ ಕರೆದು ತನ್ನ ಜಾಗದಲ್ಲಿ ಕೂರುವಂತೆ ಹೇಳಿ ಅವರಿಗೆ ಸೀಟು ಬಿಟ್ಟುಕೊಟ್ಟು ಎದ್ದು ಬಂದು ನನ್ನ ಪಕ್ಕದಲ್ಲಿಯೇ ನಿಂತು ಪಯಣಿಸಿದರು.


ಸೀಟು ಬಿಟ್ಟುಕೊಟ್ಟರೂ ಆ ಹಿರಿಯರ ಮುಖದಲ್ಲಿ ಯಾವ ನೋವಾಗಲೀ, ಭಾವನೆಯಾಗಲೀ ವಿಶೇಷವಾಗಿ ಕಾಣಲಿಲ್ಲ. ಬದಲಿಗೆ ಇದು ಸಹಜ ವರ್ತನೆ ಎಂಬಂತೆ ಸಲೀಸಾಗಿ ನಿಂತಿದ್ದರು . ಮತ್ತೇ ಈ ದೃಶ್ಯವನ್ನು ಗಮನಿಸಿದ ಉತ್ತರದ ಆ ಜೋಡಿ ಇದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಜಾಣ ಕುರುಡಿನಿಂದ ತಮ್ಮ ಮಾತುಕತೆಯಲ್ಲಿ ತಲ್ಲೀನರಾಗಿದ್ದರು.

ಇಡೀ ಈ ಸನ್ನಿವೇಶದಲ್ಲಿ ನನಗೆ ಕಂಡಿದ್ದು. ನಮ್ಮ ಕನ್ನಡಮಣ್ಣಿನವರ ಸಹಜ ಸದ್ಗುಣ ಹಾಗೂ ಸೌಜನ್ಯ ಹಾಗೂ ಇತರರ ಸಂಕಷ್ಟಕ್ಕೆ ಹಿಂದೆ ಮುಂದೆ ನೋಡದೇ ಸಹಾಯಹಸ್ತ ಚಾಚುವ ಔದಾರ್ಯತನ.


ಹಾಗಂತ ಕೇವಲ ಇದೊಂದು ಘಟನೆಯ ಆಧಾರದಿಂದ ಹಿಂದಿ ಮಾತನಾಡುವವರು ಅಥವಾ ಉತ್ತರಭಾರತದವರು ಎಲ್ಲರೂ ಹೀಗೆಯೇ ಕಲ್ಲು ಹೃದಯದವರೆಂದು ಅಥವಾ ನಿರ್ಭಾವುಕರೆಂದು ಆರೋಪಿಸುವ ದುರುದ್ದೇಶವಾಗಲೀ , ಸಿನಿಕತನವಾಗಲೀ ನನ್ನದಲ್ಲ. ಅವರಲ್ಲೂ ಸಜ್ಜನಿಕೆ ಸಹೃದಯವುಳ್ಳವರು ಸಾಕಷ್ಟು ಇರುತ್ತಾರೆ. ಇವರ್ಯಾರೋ ಅಂದು ಹಾಗಿದ್ದಿರಬಹುದು.

ಮೇಲಾಗಿ ಅಶಕ್ತರಿಗೆ, ಅಸಹಾಯಕರಿಗೆ ಸೀಟು ಬಿಟ್ಟುಕೊಡುವುದು ಬಿಡುವುದು ಅವರವರ ಮನಃಸ್ಥಿತಿಗೆ ಸಂಬಂಧಿಸಿದ ವಿಚಾರ. ನಮ್ಮಲ್ಲೂ ಬಸ್ಸುಗಳಲ್ಲಿ ರೈಲುಗಳಲ್ಲಿ ಹಿರಿಯನಾಗರಿಕರು, ಅಶಕ್ತರು ನಿಂತೇ ಪಯಣಿಸುತ್ತಿರುವುದನ್ನು ನೋಡಿಯೂ ಸಹಾಯ ಮಾಡದೇ ಇರುವ ಸಾಕಷ್ಟು ಸನ್ನಿವೇಶಗಳಿವೆ. ಅದರಲ್ಲೂ ಬಸ್ಸುಗಳಲ್ಲಿ ಹಿರಿಯನಾಗರಿಕರಿಗೆ ಮೀಸಲಾಗಿರುವ ಸೀಟುಗಳಲ್ಲಿ ಅವರಿಗೆ ಜಾಗವೇ ಸಿಗದು. ಆ ಮಾತು ಬೇರೆ .

ಇವೆಲ್ಲದರ ಹೊರತಾಗಿಯೂ, ತಾವೇ ಹಿರಿಯರಾಗಿದ್ದು ಒಬ್ಬ ಮಹಿಳೆ ತನ್ನ ಚಿಕ್ಕಮಗುವನ್ನು ಎತ್ತಿಕೊಂಡು ನಿಲ್ಲಲು ಪಡುತ್ತಿದ್ದ ಕಷ್ಟವನ್ನು ಕಂಡು ಇತರರ ಬಗ್ಗೆ ಯೋಚಿಸದೇ ಅದು ತನ್ನ ಸಹಜ ಕರ್ತವ್ಯವೆಂದೇ ಭಾವಿಸಿ ತಕ್ಷಣಕ್ಕೆ ಎದ್ದು ಸೀಟು ಬಿಟ್ಟ ಆ ಹಿರಿಯರು ತಾವು ನಿಂತೇ ಪಯಣಿಸಿದರಲ್ಲಾ.......ಆ ಗುಣ ಬಹುತೇಕ ಕನ್ನಡಿಗರ ರಕ್ತದಲ್ಲಿ ಬೆಸೆದುಕೊಂಡೇ ಬಂದಿದೆ, ಕರುನಾಡ ಮಣ್ಣಲ್ಲೇ ಬೆರೆತು ಹೋಗಿದೆ.









"ಇದೊಂದು ಚಿಕ್ಕ ಸಹಾಯ, ಇದಕ್ಕೇಕೆ ಇಷ್ಟುದ್ದ ಬಿಲ್ಡಪ್ಪು".. ಎಂದು ಕೆಲವರಿಗೆ ಅನಿಸಬಹುದು. ಆದರೆ ಅಸಹಾಯಕರಿಗೆ ಸಹಾಯ ಹಸ್ತ ಚಾಚುವುದು, ಇಲ್ಲಿನ ಭಾಷೆ ಬಾರದವರಿಗೆ ಅವರ ಭಾಷೆಯಲ್ಲೇ ಸಂವಹನ ಮಾಡಿ ಅವರಿಗೆ ಉಪಕಾರ ಮಾಡುವುದು, ಇತರರನ್ನೂ ತಮ್ಮಂತೆಯೇ ಕಂಡು ಗೌರವಿಸುವುದು, ಅನ್ಯಭಾಷಿಕರು ತಮ್ಮೊಂದಿಗೆ ಸಮಾನವಾಗಿ ಹೊಂದಾಣಿಕೆಯಿಂದ ಜೀವಿಸಲು ಔದಾರ್ಯದಿಂದ ಅನುವು ಮಾಡಿಕೊಡುವುದು...ಇವೆಲ್ಲವೂ ಕನ್ನಡಿಗರ ಹುಟ್ಟುಗುಣ.

ಬಹಳಷ್ಟು ಸಾರಿ, ಕನ್ನಡಿಗರ ಈ ಗುಣಸ್ವಭಾವಗಳೇ ಕನ್ನಡಿಗರ ಹಿತಕ್ಕೆ ಧಕ್ಕೆಯಾಗುವಂತಹ ಸಂದರ್ಭಗಳು ಉದ್ಭವಿಸಿರುವುದುಂಟು . ಆದರೂ ಇತರರ ನೋವಲ್ಲಿ ಭಾಗಿಯಾಗುವ ಕನ್ನಡಿಗರ ಔದಾರ್ಯಕ್ಕೆ ದೇಶದಲ್ಲೇ ಯಾರೂ ಸಾಟಿಯಿಲ್ಲ.

ಕನ್ನಡಿಗನು ನೀನೆಂಬ ಅಭಿಮಾನ ಹೆಮ್ಮೆಯಿರಲಿ. ಅದೇ ಸಮಯದಲ್ಲಿ ಕನ್ನಡತನವನ್ನು ಅಭಿಮಾನಪೂರ್ವಕವಾಗಿ ಗಟ್ಟಿಯಾಗಿ ನಮ್ಮಲ್ಲೇ ಉಳಿಸಿಕೊಳ್ಳುವ ಕನ್ನಡಪ್ರಜ್ಞೆಯೂ ಸದಾ ಎಚ್ಚರವಾಗಿರಲಿ.

**ಮರೆಯುವ ಮುನ್ನ**

ನಾನೂ ಸಹಾ ದೇಶದ ಅನೇಕ ರಾಜ್ಯಗಳಲ್ಲಿ ಅದರಲ್ಲೂ ದಕ್ಷಿಣದ ಎಲ್ಲಾ ರಾಜ್ಯಗಳಲ್ಲಿ ಅಲ್ಲಿನ ಸಾರ್ವಜನಿಕ ಸಾರಿಗೆಗಳಲ್ಲಿ ಪ್ರಯಾಣ ಮಾಡಿದ್ದೇನೆ , ವ್ಯವಹರಿಸಿದ್ದೇನೆ.

ಆದರೆ ಇತರೆ ಭಾಷಿಕರಿಗೆ ಇಲ್ಲಿ ನಮ್ಮ ಕನ್ನಡಿಗರು ತೋರುವಷ್ಟು ಸಹಜ ಔದಾರ್ಯ , ಅಲ್ಲಿನ ಬಹುತೇಕರು ಹೊರಗಿನವರ ಬಗ್ಗೆ ತೋರುವುದು ವಿರಳ

ಬಹುಶಃ ಈ ಕಾರಣಕ್ಕಾಗಿಯೇ ಇತರೆ ರಾಜ್ಯಗಳವರು ಅಥವಾ ಅನ್ಯಭಾಷಿಕರಿಗೆ ಕರ್ನಾಟಕವೆಂದರೆ ತಮ್ಮ ತವರುಮನೆಗಿಂತಲೂ ಹೆಚ್ಚು ಸುಖಕರ. ನನ್ನಲ್ಲೇ ಅನೇಕ ಅನ್ಯಭಾಷಿಕ ಸ್ನೇಹಿತರು ಹೇಳಿಕೊಂಡಿರುವಂತೆ ಅವರಿಗೆ ಇಲ್ಲಿಂದ ಅವರ ರಾಜ್ಯಕ್ಕೆ ವಾಪಾಸು ಹೋಗಲು ಮನಸೇ ಬಾರದಂತೆ ! ಹಾಗಾಗಿಯೇ ವೃತ್ತಿ ಕಾರಣಕ್ಕೋ ಅಥವಾ ವ್ಯವಹಾರಿಕ ಕಾರಣಕ್ಕೋ ಬೆಂಗಳೂರಿಗೆ ಬಂದು ನೆಲೆಸಿರುವ ಬಹುತೇಕ ಅನ್ಯ ರಾಜ್ಯದವರು ಇಲ್ಲಿಯೇ ಶಾಶ್ವತವಾಗಿ ನೆಲೆಯೂರಿ ಬದುಕು ಕಟ್ಟಿಕೊಳ್ಳುತ್ತಿರುವುದು.

ಇದರ ಕಾರಣ ,ಪರಿಣಾಮ– ದುಷ್ಪರಿಣಾಮಗಳ ಗಂಭೀರ ಚರ್ಚೆಯನ್ನು ಪಕ್ಕಕ್ಕಿಟ್ಟು ಸರಳವಾಗಿ ನೋಡುವುದಾದರೆ, ಅನ್ಯ ಭಾಷಿಕರು ಬೆಂಗಳೂರನ್ನು ಇಷ್ಟಪಡಲಿಕ್ಕೆ ಕನ್ನಡಿಗರ ಔದಾರ್ಯ, ಮಾಧುರ್ಯ, ಸೌಂದರ್ಯ ಹಾಗೂ ಮತ್ತೊಬ್ಬರ ಸಂಕಷ್ಟಕ್ಕೆ ಸಹಜವಾಗಿ ಸಹಾಯಹಸ್ತ ಚಾಚುವ ಸಹೃದಯತೆಗಳೇ ಬಹುಮಟ್ಟಿಗೆ ಕಾರಣ ಎಂಬುದಂತೂ ಸುಳ್ಳಲ್ಲ.

ಈ ಔದಾರ್ಯತೆಯ ಹೆಮ್ಮೆಯಲ್ಲಿ ತನ್ನನ್ನು, ತನ್ನ ಪರಂಪರೆಯನ್ನು, ತನ್ನ ಅಸ್ಮಿತೆಯನ್ನೂ ತನಗೆ ಅರಿವಿಲ್ಲದೇ ಕಳೆದುಕೊಳ್ಳುತ್ತಿರುವ ಬಗ್ಗೆಯೂ ಕನ್ನಡಿಗ ಎಚ್ಚರವಹಿಸಬೇಕಾದ , ತಾಯ್ನುಡಿ ತಾಯ್ನೆಲದ ಬಗ್ಗೆ ಜಾಗೃತಿವಹಿಸಬೇಕಾದ ತುರ್ತು ಅಗತ್ಯ ಇಂದಿನ ದಿನಗಳಲ್ಲಿ ಸ್ವಲ್ಪ ಹೆಚ್ಚೆಗೆಯೇ ಇದೆ.

ಅದನ್ನು ಕನ್ನಡಿಗರಾರೂ ಮರೆಯಬಾರದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,